ಶ್ರೀ ರಾಮಚಂದ್ರ ಮಿಷನ್®
ಆಂತರಿಕ ಪ್ರಸಾರಕ್ಕಾಗಿ ಮಾತ್ರ
ECHOES INDIA
ಜುಲೈ 2013 ಸಂಪುಟ 6 ಸಂಚಿಕೆ 4




# ಗುರುಗಳ ಸಮಾಚಾರ

## ಮೇ 2013

ಬಾಬೂಜಿ ಮಹಾರಾಜರ ಜನ್ಮದಿನೋತ್ಸವಾಚರಣೆಗಳ ನಂತರ ಗುರುಗಳು ಸಂಪೂರ್ಣವಾಗಿ ಬಳಲಿದ್ದಾರೆ. ಅವರಿಗೆ ಆಯಾಸವಾಗುತ್ತದೆ ಮತ್ತು ದೀರ್ಘಕಾಲದ ವಿಶ್ರಾಂತಿ ಬೇಕಾಗುತ್ತದೆ. ಉತ್ಸವ ಮುಗಿಯುವ ತನಕ ಅವರು ತಮ್ಮನ್ನು ಹಿಡಿದಿರಿಸಿಕೊಳ್ಳಲು ತಮ್ಮ ಇಚ್ಛಾಶಕ್ತಿಯನ್ನು ಹೇಗೆ ಬಳಸಿದ್ದರು ಮತ್ತು ಆಮೇಲೆ ಬಿಟ್ಟುಬಿಟ್ಟರು ಎಂಬುದನ್ನು ನಾವು ಕಾಣಬಹುದಿತ್ತು. ಅವರು ಚಿಕಿತ್ಸೆ, ಔಷಧಿ ಇತ್ಯಾದಿಗಳ ಪರಿಣಾಮಕ್ಕೊಳಗಾಗಿದ್ದು ತುಂಬ ಆಯಾಸಗೊಂಡು ನಿದ್ರೆಯ ಜೊಂಪಿನಲ್ಲಿರುವಂತೆ ಕಾಣುತ್ತಿದ್ದರು. ಆದರೆ ಅವರು ಲವಲವಿಕೆಯಿಂದ ಇದ್ದ ದಿನಗಳೂ ಅಲ್ಲಿದ್ದವು. ಅದು ತುಂಬ ಅನೂಹ್ಯವಾಗಿದ್ದು ಒಂದು ದಿನ ಅವರು ಚೆನ್ನಾಗಿರುತ್ತಿದ್ದರು ಮತ್ತು ಮರುದಿನ ಸಂಪೂರ್ಣವಾಗಿ ಬಳಲಿರುತ್ತಿದ್ದರು. ಗುರುದೇವನ ನೋವಿನ ಮೌನವೀಕ್ಷಕರಾಗಿರುವುದು ತುಂಬ ದುಃಖದ ಸಂಗತಿ ಆದರೆ ನಾವು ಅವರಿಗಾಗಿ ಪ್ರಾರ್ಥನೆಯನ್ನಷ್ಟೇ ಮಾಡಬಲ್ಲೆವು.

ಮೇ ತಿಂಗಳ ಮೊದಲ ವಾರಾಂತ್ಯದಲ್ಲಿ, ಗುರುಗಳ ವಿಕಿರಣಚಿಕಿತ್ಸೆ ಕೊನೆಗೊಂಡಿದೆ. ನೋವು ಕಡಿಮೆಯಾಗಿದ್ದರೂ ಅವರಿನ್ನೂ ಔಷಧಿ ಮತ್ತು ನೋವುನಿವಾರಕಗಳಿಗೆ ಒಡ್ಡಿಕೊಂಡಿದ್ದಾರೆ. ನಡೆದಾಡುವುದನ್ನು ಬಿಟ್ಟು ಗಾಲಿಕುರ್ಚಿಯಲ್ಲಿ ಸುತ್ತಾಡಬೇಕೆಂದು ಗುರುಗಳಿಗೆ ಸೂಚಿಸಲಾಗಿದೆ. ಅಗತ್ಯವಾದಾಗ ಕೆಲ ಹೆಜ್ಜೆಗಳನ್ನು ನಡೆಯಬೇಕಾದರೆ ನಡಿಗೆಯ ಸಹಾಯಕವನ್ನು ಉಪಯೋಗಿಸಲು ವೈದ್ಯರು ಸಲಹೆ ಮಾಡಿದ್ದಾರೆ. ಗುರುಗಳ ಚಲನವಲನವನ್ನು ಇದು ಮಂದಗೊಳಿಸಿದೆ, ಆದರೆ ಅವರು ಈ ಹೊಸವಿಧಾನಕ್ಕೆ ಹೊಂದಿಕೊಂಡಿದ್ದು, ದೇದೀಪ್ಯಮಾನವಾದ ಮುಗುಳ್ನಗುವಿನೊಂದಿಗೆ ತನ್ನ ಗಾಲಿಕುರ್ಚಿಯಲ್ಲಿ ಸುತ್ತೆಲ್ಲ ಚಲಿಸುತ್ತಿದ್ದಾರೆ. ಸತ್ಸಂಗಕ್ಕಾಗಿ ಅವರು ಧ್ಯಾನಮಂದಿರಕ್ಕೆ ಆಗಮಿಸುವ ಅಪರೂಪದ ದಿನಗಳಲ್ಲಿ, ಅವರು ವೇದಿಕೆಯಲ್ಲಿ ತಮ್ಮ ಗಾಲಿಕುರ್ಚಿಯಲ್ಲಿ ದೇದೀಪ್ಯಮಾನರಾಗಿ ಬೆಳಗುತ್ತಿರುವುದನ್ನು ನಾವು ಕಾಣಬಹುದಾಗಿದೆ. ಮೇ 12, 2013ರ ರವಿವಾರ ಗುರುಗಳು ಧ್ಯಾನಮಂದಿರಕ್ಕೆ ಬಂದು ಒಂದು ಸತ್ಸಂಗವನ್ನು ನಡೆಸಿಕೊಟ್ಟಿದ್ದು, ಅದು ಗಂಟೆಗಿಂತಲೂ ದೀರ್ಘಾವಧಿಯದಾಗಿತ್ತು.

ಅನೇಕ ಸಾಯಂಕಾಲಗಳಲ್ಲಿ ಗುರುಗಳು ಹೊರಗೆ ಬಂದು ಕುಟೀರದ ಮುಂಭಾಗದಲ್ಲಿ ಸುಮಾರು ಒಂದು ಗಂಟೆಯ ಕಾಲ ಕುಳಿತುಕೊಳ್ಳುತ್ತಿದ್ದರು. ಹೀಗೆ ಅನೇಕ ಅಭ್ಯಾಸಿಗಳಿಗೆ ಅವರನ್ನು ಭೇಟಿಯಾಗಲು ಸಾಧ್ಯವಾಗಿದ್ದು, ವೈಯಕ್ತಿಕ ನೆಲೆಯಲ್ಲಿ ಗುರುಗಳೊಂದಿಗೆ ಸಂಭಾಷಿಸಲಾಗದಿದ್ದರೂ, ಅವರ ಸಾನ್ನಿಧ್ಯದಲ್ಲಿ ಮೌನವಾಗಿ ಕುಳಿತುಕೊಳ್ಳಲು ಅದೊಂದು ಸದವಕಾಶವಾಗಿತ್ತು. ಕೆಲವೊಮ್ಮೆ ಗುರುಗಳು ಮಾತನಾಡುತ್ತಿದ್ದರು, ಆದರೆ ಹೆಚ್ಚಿನ ಸಮಯ ಅವರು ಮೌನವಾಗಿರುತ್ತಿದ್ದರು. ಕುಟೀರದ ಹೊರಗೆ ಬೃಹತ್ ವೃಕ್ಷಗಳಿದ್ದು ಅವುಗಳಲ್ಲಿ ನೆಲೆಸಿರುವ ಅನೇಕಾನೇಕ ಪಕ್ಷಿಗಳು, ಗುರುಗಳು ಅಲ್ಲಿ ಹೊರಗಡೆ ಕುಳಿತುಕೊಂಡಿರುವಾಗ ಸಂತೋಷದಿಂದ ಚಿಲಿಪಿಲಿಗುಟ್ಟುತ್ತವೆ.

ಮೇ ಮಧ್ಯಭಾಗದಲ್ಲಿ, ಗುರುಗಳ ಹೆಚ್ಚಿನ ವೈದ್ಯಕೀಯ ಚಿಕಿತ್ಸೆ ಮುಂದುವರಿದಿದ್ದು ಅದು ವೈದ್ಯಕೀಯ ಪರೀಕ್ಷೆ ಮತ್ತು ಮುಂದುವರಿದ ಔಷಧೀಕರಣವನ್ನು ಒಳಗೊಂಡಿತ್ತು. ಗುರುಗಳು ಯಾವುದೇ ಔಷಧಿಯನ್ನು ತೆಗೆದುಕೊಂಡರೂ ಅದು ಅವರ ಮೇಲೆ ಪರಿಣಾಮ ಬೀರುತ್ತಿದ್ದು ಅವರು ಸಂಪೂರ್ಣ ಬಸವಳಿದಂತೆ ಕಾಣುತ್ತಾರೆ. ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ಗುರುಗಳಿಗೆ ಕೆಲಸವಿರುವಾಗ, ಅವರೆಷ್ಟೇ










ನೋವನ್ನನುಭವಿಸುತ್ತಿದ್ದರೂ, ಏನೂ ಗೋಚರಿಸುವುದಿಲ್ಲ ಮತ್ತು ಅವರು ತನ್ನನ್ನು ಕೆಲಸದಲ್ಲಿ ತೊಡಗಿಕೊಂಡು ಅದನ್ನು ಮುಗಿಸುತ್ತಾರೆ. ಕೆಲಸ ಮುಗಿದ ನಂತರ ನೋವು ಮತ್ತೆ ಕಾಣಿಸಿಕೊಳ್ಳುತ್ತದೆ. ಈ ಬಾರಿ ಅವರು ಈ ಚಿಕಿತ್ಸೆಗೊಳಗಾಗಿದ್ದಾಗ, ಮುಂದಿನ ಸುಮಾರು ಹತ್ತು ದಿನಗಳ ಕಾಲ ಅವರು ತೀರಾ ಬಳಲಿದ್ದರು. ಅವರು ದಿನದ ಹೆಚ್ಚಿನ ಭಾಗವನ್ನು ವಿಶ್ರಾಂತಿಯಲ್ಲಿ ಕಳೆಯುತ್ತಿದ್ದರು. ತಿಂಗಳ ಕೊನೆಯಲ್ಲಿ ಗುರುಗಳಿಗೆ ಮತ್ತೂ ನೋವಿರುವಂತೆ ಕಾಣಿಸುತ್ತಿದ್ದು ಅವರನ್ನು ಒಂದು ಒಖಿಖ (ಅಯಸ್ಕಾಂತೀಯ ಅನುರಣನಾ ಬಿಂಬನ)ಗಾಗಿ ಕರೆದೊಯ್ಯಲು ನಿರ್ಧರಿಸಲಾಯಿತು. ಪರೀಕ್ಷೆಯ ಫಲಿತಾಂಶಗಳು ಚೆನ್ನಾಗಿದ್ದು ಗುರುಗಳು ಹಾಗೂ ಎಲ್ಲಾ ವೈದ್ಯರುಗಳು ನಿರಾಳವಾದರು.

ಗುರುಗಳಿಗೆ ಒಂದು ಹೊಸ ಇಲೆಕ್ಟ್ರಾನಿಕ್ ಕುರ್ಚಿ ಬಂದಿದ್ದು, ಅದನ್ನು ಒಂದು ಗುಂಡಿಯ ಸಹಾಯದಿಂದ ಎತ್ತರಿಸಲು ಮತ್ತು ತಗ್ಗಿಸಬಹುದಾಗಿದೆ ಮತ್ತು ಗುರುಗಳು ಅದನ್ನು ಶಿಶು–ಸದೃಶ ಉಲ್ಲಾಸದಿಂದ ಚಲಾಯಿಸುತ್ತಾರೆ.

ತಿಂಗಳ ಕೊನೆಗಾಗುವಾಗ ಗುರುಗಳ ಆರೋಗ್ಯ ಸುಧಾರಿಸಿದೆ ಮತ್ತು ತಮ್ಮ ಆರೋಗ್ಯ ಸುಧಾರಿಸಿದ ಕೂಡಲೇ ಅವರು ತಮ್ಮ ಪ್ರಥಮ ಮತ್ತು ಅತ್ಯಂತ ಮುಖ್ಯ ಕಾರ್ಯವಾದ ಪ್ರಶಿಕ್ಷಕ ಬೈಠಕ್‌ಗಳನ್ನು ಆರಂಭಿಸಿದರು. ಹೆಚ್ಚಿನ ದಿನಗಳಲ್ಲಿ ಅವರು ಮುಂಜಾವದಲ್ಲಿ ಒಂದು ಪ್ರಶಿಕ್ಷಕ ಬೈಠಕ್ ಕೊಡುತ್ತಿದ್ದರು ಮತ್ತು ತನ್ನ ಬೆಳಗಿನ ಉಪಾಹಾರದ ನಂತರ ಯಾರಾದರೂ ಅಭ್ಯಾಸಿಗೆ ಇನ್ನೊಂದು ವೈಯಕ್ತಿಕ ಬೈಠಕ್ ಅಥವಾ ಒಂದು ಗುಂಪಿಗೆ ಬೈಠಕ್ ಕೊಡುತ್ತಿದ್ದರು.

ಒಂದು ಸಾಯಂಕಾಲ, ಕುಟೀರದ ಅಂಗಣದಲ್ಲಿ ಸೋ. ಗುರುಪ್ರೀತ್ ಸಿಂಗ್ ಅವರಿಂದ ಒಂದು ಭಜನಾ ಕಾರ್ಯಕ್ರಮವಿತ್ತು. ಅಭ್ಯಾಸಿಗಳು ಅಂಗಣದಲ್ಲಿದ್ದರು ಮತ್ತು ಗುರುಗಳು ತನ್ನ ಕಛೇರಿಯಲ್ಲಿ ಕುಳಿತಿದ್ದರು. ಕೆಲ ಹಾಡುಗಳ ನಂತರ ಗುರುಗಳು ಸುಸ್ತಾದರು ಮತ್ತು ಮಲಗಲು ಒಳಗೆ ಹೋದರು. ಆದರೆ ಅದನ್ನು ಮುಂದುವರಿಸುವಂತೆ ಗುರುಪ್ರೀತ್‌ರನ್ನು ಕೇಳಿಕೊಂಡರು.

ಮೇ 28ರಂದು ಸೋ. ಪಿ. ಆರ್. ಕೃಷ್ಣ ಅವರ 56ನೇ ಜನ್ಮದಿನವಾಗಿತ್ತು. ಗುರುಗಳು ಅವರಿಗೆ ಶುಭ ಹಾರೈಸಿದರು, ಆಶೀರ್ವದಿಸಿದರು ಮತ್ತು ಕೊಠಡಿಯಲ್ಲಿದ್ದ ಎಲ್ಲರಿಗೂ ಪ್ರಸಾದವನ್ನು ಹಂಚಿದರು. ಆ ದಿನ ಸಾಯಂಕಾಲ ಮಳೆ ಬಂದು ಚೆನ್ನೈ ತುಂಬ ತಂಪಾಯಿತು ಮತ್ತು ಬೇಸಗೆಯ ಬಿಸಿಯ ದಿನಗಳು ಕೊನೆಯಾಗುತ್ತಿರುವ ಸೂಚನೆಯನ್ನು ಕೊಟ್ಟಿತು.

ಬೆಳಗಿನ ಜಾವದಲ್ಲಿ ಕುಟೀರದ ಹೊರಗಡೆ ಕುಳಿತುಕೊಳ್ಳುವದು ಗುರುಗಳ ಇನ್ನೊಂದು ಹೊಸ ನಿಯತ ಕಾರ್ಯಕ್ರಮವಾಗಿದೆ. ಅವರು ಪ್ರಾತಃಕಾಲ 5 ಗಂಟೆಗೆ ಏಳುತ್ತಾರೆ, ಸುಮಾರು 5.30 ಗಂಟೆಗೆ ಹೊರಗೆ ಬರುತ್ತಾರೆ ಮತ್ತು 6.15ಕ್ಕೆ ಮತ್ತೆ ಒಳಗಡೆ ಹೋಗುತ್ತಾರೆ. ಆ ಸಮಯದಲ್ಲಿ ಪ್ರಶಿಕ್ಷಕ ಅಭ್ಯರ್ಥಿ ಕೂಡಾ ಬರುತ್ತಾರೆ ಮತ್ತು ಆಗ ಗುರುಗಳು ಪ್ರಶಿಕ್ಷಕ ಬೈಠಕನ್ನು ಪ್ರಾರಂಭಿಸುತ್ತಾರೆ. ವಿಶೇಷತಃ ವಾತಾವರಣವು ತಂಪಾಗತೊಡಗಿದಂತೆ ಇದು ಹೆಚ್ಚಾಗಿ ಆವರ್ತಿಸತೊಡಗಿದೆ. ಒಟ್ಟಿನಲ್ಲಿ, ಗುರುಗಳ ಆರೋಗ್ಯ ಸುಧಾರಿಸತೊಡಗಿದೆ; ಅವರು ಹೆಚ್ಚು ಹೆಚ್ಚು ಚಲನಶೀಲರಾಗುತ್ತಿದ್ದಾರೆ ಮತ್ತು ನಿಧಾನವಾಗಿ ಅವರ ಸಾಮಾನ್ಯ ನಿತ್ಯಕಾರ್ಯಕ್ರಮಗಳು ಮತ್ತೆ ಪ್ರಾರಂಭವಾಗಿವೆ.





## ಜೂನ್ 2013

ಗುರುಗಳ ಆರೋಗ್ಯ ಸುಧಾರಿಸತೊಡಗಿದಂತೆ ಅವರು ಎಲ್ಲ ಪ್ರಶಿಕ್ಷಕ ಬೈಠಕ್‌ಗಳನ್ನು ತಾವೇ ಕೊಡಲಾರಂಭಿಸಿದ್ದಾರೆ. ಜೂನ್ 1ರಂದು ಅವರು ಒಬ್ಬ ಅಭ್ಯಾಸಿಯಿಂದ, ಅಮೆರಿಕಾದಲ್ಲಿ ನಿರ್ಮಾಣಗೊಂಡಿದ್ದ ಮೊತ್ತಮೊದಲ ರೈಲುಗಾಡಿಯ ಮಾದರಿಯ ಪ್ರತಿಕೃತಿಯ ಉಡುಗೊರೆಯೊಂದನ್ನು ಪಡೆದರು. ಗುರುಗಳು ಅದರ ಪರಿಪೂರ್ಣತೆಯಿಂದ ಪ್ರಭಾವಿತರಾದರು ಮತ್ತು ಅವರ ಸಂತಸವು ಅವರೊಡನೆ ಉಪಸ್ಥಿತರಿದ್ದ ಎಲ್ಲರಿಗೂ ಪಸರಿಸಿತು. ಗುರುಗಳು ಅದನ್ನು ತುಂಬ ಜಾಗ್ರತೆಯಿಂದ ಹಿಡಿದುಕೊಂಡು, ಅದು ಸ್ವಲ್ಪ ದೊಡ್ಡದಾಗಿಯೇ ಇದ್ದರೂ ತನ್ನ ಷೋಕೇಸ್‌ನಲ್ಲಿ ಅದಕ್ಕೊಂದು ಸ್ಥಾನವನ್ನು ಕಲ್ಪಿಸಿಕೊಟ್ಟರು.

### ಒಮೇಗಾ ವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿಚಾರಗೋಷ್ಠಿಗಳು

ಜೂನ್‌ನಲ್ಲಿ ಒಮೇಗಾ ವಿದ್ಯಾಲಯದ ಹಳೆಯ ವಿದ್ಯಾರ್ಥಿಗಳಿಗಾಗಿ ಎರಡು ವಿಚಾರಗೋಷ್ಠಿಗಳು ಅನುಕ್ರಮವಾಗಿ ಸಂಘಟಿಸಲ್ಪಟ್ಟಿವೆ, ಮೊದಲನೆಯ ಅದಿ ವೇಶನವು ಜೂನ್ ತಿಂಗಳ ಮೊದಲ ವಾರದಲ್ಲಿ ನಡೆದರೆ, ಎರಡನೆಯ ಅದಿ ವೇಶನವು ಎರಡನೆಯ ವಾರದಲ್ಲಿ ನಡೆಯಲಿವೆ. ಮುಂಬರುವ ಈ ಎರಡು ವಿಚಾರಗೋಷ್ಠಿಗಳ ಕಾರ್ಯಕ್ರಮ ಸಂಯೋಜಕರುಗಳು ಬಂದು ಗುರುಗಳನ್ನು ಭೇಟಿಯಾದರು ಮತ್ತು ವಿಚಾರಗೋಷ್ಠಿಯ ಬಗ್ಗೆ ತಮ್ಮಲ್ಲಿದ್ದ ಅನೇಕ ಪ್ರಶ್ನೆಗಳನ್ನು ತಿಳಿಗೊಳಿಸಲು ಒಂದು ಕಿರು ಚರ್ಚೆಯನ್ನು ಇಟ್ಟುಕೊಂಡಿದ್ದರು.

ಸಾಯಂಕಾಲಗಳಲ್ಲಿ, ಗುರುಗಳು ನಡಿಗೆಯ ಸಹಾಯಕದೊಂದಿಗೆ ಕುಟೀರದ ಪ್ರವೇಶದ್ವಾರದ ವರೆಗೂ ಹೋಗಿ, ಹೊರಗೆ ಗಾಲಿಕುರ್ಚಿಯಲ್ಲಿ ಕುಳಿತು ಕೊಳ್ಳುತ್ತಿದ್ದರು. ಇದು ಅವರಿಗೆ ಸ್ವಲ್ಪ ವ್ಯಾಯಾಮವನ್ನು, ನಿರ್ಮಲವಾದ ಗಾಳಿಯನ್ನು ಮತ್ತು ಅವರು ಎದುರುನೋಡುತ್ತಿದ್ದ, ಅಭ್ಯಾಸಿಗಳನ್ನು ಭೇಟಿಯಾಗುವ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದೆ.


ಜೂನ್ 2ರ ರವಿವಾರ, ಗುರುಗಳು ಧ್ಯಾನಮಂದಿರದಲ್ಲಿ ಸತ್ಸಂಗವನ್ನು ನಡೆಸಿದರು ಮತ್ತು ಅದು ಒಂದು ಗಂಟೆಯದ್ದಾಗಿತ್ತು. ಸತ್ಸಂಗದ ನಂತರ ಅವರು ಕುಟೀರಕ್ಕೆ ಹಿಂತಿರುಗಿದರು. ಹಿಂದಿನ ದಿನ ಮತ್ತು ಆದಿನ ಬೆಳಗ್ಗೆ ಅವರು ಅನೇಕ ಅಭ್ಯಾಸಿಗಳನ್ನು ಭೇಟಿ ಮಾಡಿದ್ದ ಕಾರಣದಿಂದ ಕುಟೀರದಲ್ಲಿ ಅಷ್ಟೊಂದು ಜನನಿಬಿಡತೆ ಇರಲಿಲ್ಲ. ಅಭ್ಯಾಸಿಗಳ ಹೃದಯಗಳಲ್ಲಿ ಒಂದು ರೀತಿಯ ಸಂತೃಪ್ತಿಯ ಭಾವ ಸುವೇದ್ಯವಾಗಿತ್ತು. ಗುರುಗಳು ತನ್ನನ್ನೇ ಎಲ್ಲರ ಹೃದಯಗಳಲ್ಲಿ ತುಂಬಿದಂತೆ ಇತ್ತು. ಮತ್ತು ಪ್ರತಿಯೊಬ್ಬರೂ ಸಂತೃಪ್ತರಾಗಿ ಸಂತೋಷಭರಿತರಾಗಿದ್ದರು. ಗುರುಗಳು, "ಸಂತೋಷವು ಸಂತೃಪ್ತಿಯನ್ನು ಕೊಡುವುದಿಲ್ಲ ಆದರೆ ಸಂತೃಪ್ತಿಯು ಸಂತೋಷದಲ್ಲಿ ಫಲಕೊಡುವುದು." ಎಂದರು. ಗುರುಗಳು ಹೊರಗೆ ಬಂದು ಸತ್ಸಂಗವನ್ನು ನಡೆಸದೆ ಕೆಲವು ವಾರಗಳೇ ಕಳೆದಿದ್ದ ಕಾರಣದಿಂದಾಗಿ ಅಂದು ಅವರು ತುಂಬ ಸಂತೋಷದಲಿ ್ಲರುವುದನ್ನು ಕಾಣಬಹುದಾಗಿತ್ತು.

ಗುರುಗಳಿಗೆ ತನ್ನ ಕಛೇರಿಯಲ್ಲಿ ಅಭ್ಯಾಸಿಗಳ ಒಂದು ಸಣ್ಣ ಗುಂಪಿನೊಂದಿಗೆ ತುಂಬಾ ಆಹ್ಲಾದಕರ ಸಮಯವೊಂದು ಲಭಿಸಿತ್ತು. ಉಲ್ಲಾಸದ ಲಹರಿಯಲ್ಲಿ ಆರಂಭವಾದ ಅದನ್ನು ಆಮೇಲೆ ಗುರುಗಳು ಒಂದು ಚರ್ಚೆಯಾಗಿ ಪರಿವರ್ತಿಸಿದರು:

- ಮಾಹಿತಿ ತಂತ್ರಜ್ಞಾನದ ಇಲಾಖೆಯಲ್ಲಿ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತ: ಇಂದಿನ ಜೀವನವೇ ಜಿಪುಣತನ ಮತ್ತು ಅಪ್ರಮಾಣಿಕತೆಯನ್ನು ಉತ್ತೇಜಿಸುತ್ತದೆ.
- ಭಯವು ನಿಮ್ಮನ್ನು ನೀವು ಭಯಪಡುತ್ತಿರುವುದರೆಡೆಗೆ ಸೆಳೆಯುತ್ತದೆ. ಇನ್ನೊಂದರೆಡೆಗೆ ಚಾಚಲ್ಪಟ್ಟಿರುವ ನಿಮ್ಮ ಭಯವೇ ಅದಾಗಿದೆ.
- ಅಭ್ಯಾಸಿಗಳ ನಾಲ್ಕು ತಲೆಮಾರುಗಳುಳ್ಳ ಒಂದೇ ಕುಟುಂಬವೆಂದರೆ ಗುರುಗಳ ಕುಟುಂಬ ಮಾತ್ರ.

ಜೂನ್ 3ರ ಸೋಮವಾರ, ಒಮೇಗಾ ವಿದ್ಯಾಲಯದ ಹಳೆವಿದ್ಯಾರ್ಥಿಗಳ ವಿಚಾರಗೋಷ್ಠಿಯ ಮೊದಲ ದಿನ – ಮೊದಲ ಅಧಿವೇಶನ. ಗುರುಗಳು ಪೂರ್ವಾಹ್ನ 9 ಗಂಟೆಗೆ ಬಂದು ಸತ್ಸಂಗವನ್ನು ನಡೆಸಿದರು. ಸತ್ಸಂಗವು ಒಂದು ಗಂಟೆಯದಾಗಿತ್ತು, ತದನಂತರ ಗುರುಗಳು ಒಂದು ಭಾಷಣವನ್ನಿತ್ತರು. ತನ್ನ ಸ್ಫೂರ್ತಿದಾಯಕ ಭಾಷಣದಲ್ಲಿ ಅವರು ಭಾರತದಲ್ಲಿ ಭ್ರಷ್ಟಾಚಾರದ ವಿವಿಧ ಕೋನಗಳನ್ನು ಉಲ್ಲೇಖಿಸುತ್ತ, ಬರೇ ತಮ್ಮದು ಮಾತ್ರವಲ್ಲ ದೇಶದ ಭವಿಷ್ಯತ್ತನ್ನೇ ರೂಪಿಸುವ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವುದು ಮುಂದಿನ ತಲೆಮಾರಿಗೆ ಸೇರಿದ್ದು ಹೇಗೆ ಎಂಬುದನ್ನು ಹೇಳಿದರು. ಗುರುಗಳು, ಈ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರೂ ಸಮಾಜದ ಒತ್ತಡಗಳಿಗೆ ಸಿಕ್ಕಿ ಬದಲಾಗಬಾರದು ಬದಲಾಗಿ ತಾನು ಬದಲಾಗದಿರುವ ವೇಗವರ್ಧಕದಂತೆ ಅವರು ಸಮಾಜದಲ್ಲಿ ಬದಲಾವಣೆಯನ್ನು ತರಬಲ್ಲರು ಎಂದರು. ತಾನು ಒಮೇಗಾ ವಿದ್ಯಾಲಯದ ವಿದ್ಯಾರ್ಥಿಗಳಿಂದ ಏನನ್ನು ನಿರೀಕ್ಷಿಸುತ್ತಿರುವುದು ಇದನ್ನೇ, ಬರೇ ಹೆಚ್ಚು ಅಂಕಗಳನ್ನು ಗಳಿಸುವುದಲ್ಲ, ಬದಲಾಗಿ ಅವರು




ಮಹತ್ವಾಕಾಂಕ್ಷೆಯ ಬದಲಿಗೆ, ಉನ್ನತಾಕಾಂಕ್ಷೆಗೆ ಪ್ರಾಮುಖ್ಯತೆ ಕೊಡುವ ಉತ್ತಮ ಮತ್ತು ಸರ್ವತೋಮುಖ ಬೆಳವಣಿಗೆಯುಳ್ಳ ಮಾನವರಾಗಬೇಕು ಎಂದರು. ಅವರು ಮತ್ತೆ ಹಣವು ಸಂತೋಷ ಅಥವಾ ಸಂತೃಪ್ತಿಯನ್ನು ಕೊಡಲಾರದು ಆದರೆ ಸಂತೃಪ್ತಿಯು ಸಂತೋಷವನ್ನು ಕೊಡುವುದು ಎಂಬ ಅಂಶವನ್ನು ಒತ್ತಿಹೇಳಿದರು. ನಂತರ ಗುರುಗಳು ಇತರ ಕೆಲ ಅಭ್ಯಾಸಿಗಳಲ್ಲಿ ಭಾಷಣಗಳನ್ನು ಕೊಡಲು ಹೇಳಿದರು. ಹಳೆಯ ವಿದ್ಯಾರ್ಥಿಗಳೆಲ್ಲರನ್ನೂ ಪ್ರತಿದಿನ 9 ಗಂಟೆಗೆ ಸತ್ಸಂಗಕ್ಕಾಗಿ ಕುಟೀರಕ್ಕೆ ಬರಲು ಹೇಳಲಾಯಿತು.

ಕಾರ್ಯಕಾರಿ ಸಮಿತಿಯ ಸಭೆ

ಜೂನ್ 5ರ ಬುಧವಾರದಂದು ಏಳು ವಿವಾಹಗಳು ನಡೆಯಲಿದ್ದು, ಗುರುಗಳು ಸತ್ಸಂಗಕ್ಕೆ ಹೋಗಲು ಸಿದ್ಧರಾಗಿದ್ದರು. ಆದರೆ ವೈದ್ಯರ ಸಲಹೆಯ ಮೇರೆಗೆ ಅವರು ಕುಟೀರದಲ್ಲೇ ವಿಶ್ರಮಿಸಿದರು. ಅಲ್ಲದೆ, ಸತ್ಸಂಗದ ನಂತರ ಅವರಿಗೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಬೇಕಿದ್ದಿತು. ಅವರ ಬದಲು ಸೋ.ಕಮಲೇಶ್‌ರವರು ಧ್ಯಾನಮಂದಿರಕ್ಕೆ ತೆರಳಿದರು. ಕಾರ್ಯಕಾರಿ ಸಮಿತಿ ಸದಸ್ಯರು ಕುಟೀರದಲ್ಲಿ ಸೇರಿದರು ಹಾಗು ಬಹು ಕಾಲದ ನಂತರ ನಡೆದ ಈ ಸಭೆಯಲ್ಲಿ ಗುರುಗಳು ಪೂರ್ಣ ಸಮಯ ಹಾಜರಿದ್ದರು. ಸಾಮಾನ್ಯವಾಗಿ, ಗುರುಗಳು ಸಭೆಯ ಕೊನೆಯಲ್ಲಿ ಅವರನ್ನು ಸೇರಿಕೊಳ್ಳುವರು. ಸಭೆಯ ಕಾರ್ಯಕಲಾಪಗಳನ್ನು ಗಮನಿಸಿದ ಅವರು ಮಿಷನ್ನಿನಲ್ಲಿ ಒಳ್ಳೆಯ ಕಾರ್ಯಗಳು– ಸಿಂಗಪೂರ್ ಮತ್ತು ಕತಾರ್‌ನಲ್ಲಿ ಧ್ಯಾನಮಂದಿರಗಳು, LMOISನಲ್ಲಿ ಅಂತರರಾಷ್ಟ್ರೀಯ ಬ್ಯಾಕೊಲರೇಟ್(ಪದವಿ) ಪ್ರದಾನಕ್ಕೆ ಅಂಗೀಕಾರ ದೊರಕಿರುವುದು, ಅಭ್ಯಾಸಿ ಮತ್ತು ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಉತ್ತಮಗೊಳಿಸಿರುವುದು ಇತ್ಯಾದಿ, ಜರುಗುತ್ತಿವೆ ಎಂದರು.

ಭಾರತದ ಆಶ್ರಮಗಳನ್ನು ಫಲಪ್ರದಗೊಳಿಸುವ ಕುರಿತು ಮಾತನಾಡುತ್ತಾ ಗುರುಗಳು, ಸಹಜಮಾರ್ಗಕ್ಕೆ ಸಮರ್ಪಿತಗೊಂಡ ಎರಡು ಪರಿವಾರಗಳು ಸಹ ಅಲಿ ್ಲದ್ದು ಆಶ್ರಮವನ್ನು ನೋಡಿಕೊಳ್ಳಲು ಒಪ್ಪುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿದರು. ಅವರ ಬಳಿ ನಿವೃತ್ತ ಅಭ್ಯಾಸಿ/ಪ್ರಶಿಕ್ಷಕರ ಪಟ್ಟಿ ಇದ್ದರೂ, ಅವರು ತಾವು ಬಯಸಿದ ಆಶ್ರಮದಲ್ಲಿ ಇರಲು ಒಪ್ಪುತ್ತಿಲ್ಲ ಎಂದರು.

ಸಭೆಯ ಕೊನೆಯಲ್ಲಿ ಅವರು ತಮ್ಮ ಕುರ್ಚಿಯಿಂದ ನಿಧಾನವಾಗಿ ಎದ್ದು, ವಾಕರ್‌ನ ಸಹಾಯದಿಂದ ತಮ್ಮ ಕಚೇರಿಗೆ ಸಾವಕಾಶವಾಗಿ ನಡೆದು ಹೋದರು. "ಅವರು ನೋವನ್ನಿತ್ತರೆ, ಅದನ್ನು ಭರಿಸುವ ಶಕ್ತಿಯನ್ನೂ ಕೊಡುವರು" ಎಂದು ಅವರು ಹೇಳಿದರು. ಅವರಿಗೆ ಸಾಕಷ್ಟು ಬಳಲಿದ್ದರೂ ಸಹ ಅಂದು ವಿವಾಹವಾದ ದಂಪತಿಗಳೆಲ್ಲರನ್ನೂ ಭೇಟಿಯಾದರು, ಮಾತನಾಡಿದರು ಮತ್ತು ಅವರನ್ನು ಆಶೀರ್ವದಿಸಿ ಅವರೊಂದಿಗೆ ಫೋಟೋ ತೆಗೆಸಿಕೊಂಡರು.

## LMOIS ವಿದ್ಯಾರ್ಥಿಗಳೊಡನೆ ಮಾತುಕತೆ

ಒಮ್ಮೆಗಾ ಶಾಲೆಯ ಹಳೆಯ ವಿದ್ಯಾರ್ಥಿಗಳಿಗೆ ಗುರುಗಳು ಬಹಳ ಸಮಯ ನೀಡಿದರು. ಒಂದೇ ಬಾರಿಗೆ ಗುರುಗಳ ಕಚೇರಿಯಲ್ಲಿ, ಅವರ ಸುತ್ತಲೂ 70ಕ್ಕೂ ಮಿಗಿಲಾದ ಸಂಖ್ಯೆಯಲ್ಲಿ ಮಕ್ಕಳು ಸೇರಿದ್ದರು. ಅವರಿಗೆ ಕೇಳಿದ ಎಲ್ಲ ಪ್ರಶ್ನೆಗಳಿಗೂ ಅವರು ಒಂದೇ ಉತ್ಸಾಹದಿಂದ ಉತ್ತರಿಸಿದರು.

ಒಬ್ಬ ಸೋದರಿಯು ಬೆಳಗಿನ ಜಾವ ಎದ್ದು ಧ್ಯಾನ ಮಾಡುವುದು ಕಷ್ಟವೆಂದು ಹೇಳಿದಾಗ ಗುರುಗಳು, "ನೋಡು, ನನಗೆ ಪ್ರತಿ ರಾತ್ರಿ ಕೋಣೆಯಲ್ಲಿ ಪಕ್ಷಿಗಳ ಕಲರವ ಕೇಳುತ್ತದೆ. ರಾತ್ರಿ ಎರಡೂವರೆ ಸುಮಾರಿಗೆ ಒಂದೇ ಪಕ್ಷಿ ನಿದ್ರೆಯಲ್ಲಿ ಚಿಲಿಪಿಲಿಗುಡುತ್ತದೆ. ಮುಂಜಾನೆ 3.30ರ ಹೊತ್ತಿಗೆ ಸುಮಾರು ಅರ್ಧ ಡಜನ್ ಪಕ್ಷಿಗಳು ಹಾಡತೊಡಗುತ್ತವೆ ಮತ್ತು 5 ಘಂಟೆಯ ಹೊತ್ತಿಗೆ ಎಲ್ಲವೂ ಎಚ್ಚರಗೊಂಡು ಹಾಡುತ್ತಾ, ಒಂದನ್ನೊಂದು ಕರೆಯತೊಡಗಿರುತ್ತವೆ. ಅದನ್ನು ಅಭ್ಯಾಸ ಮಾಡಿಕೋ, 'ಅಷ್ಟು ಬೇಗನೆ ಎದ್ದು ಏನು ಮಾಡಲಿ' ಎನ್ನಬೇಡ. ನಿನಗೆ ಗೊತ್ತೇ, ಏನೇ ಆದರೂ ನಾನು ಅಂದಿನ ದಿನದ ಕೆಲಸ ಮುಗಿಸುವವರೆಗೂ ನಿದ್ರಿಸುವುದಿಲ್ಲ. ನಾನು ನಾಳೆಗೆ ಯಾವುದನ್ನೂ ಬಾಕಿ ಇಡುವುದಿಲ್ಲ. ಏನನ್ನೂ! ಅವು ಇ–ಮೇಲ್‌ಗಳಿರಲಿ, ಪತ್ರಗಳಿರಲಿ ಅಥವಾ ಬೈಠಕುಗಳಿರಲಿ. ಜನ, 'ಅರೆ, ನೀವು ದಣಿದಿರುವಿರಿ, ವಿರಮಿಸಿ' ಎನ್ನುತ್ತಾರೆ. ಆಗ ನಾನು ಹೇಳುತ್ತೇನೆ, 'ವಿಶ್ರಾಂತಿಯಿಲ್ಲ. ಕೆಲಸ ಮುಗಿಸಿದ ನಂತರವೇ ವಿಶ್ರಾಂತಿ ಮಾಡುತ್ತೇನೆ.' ವಿಶ್ರಾಂತಿ ನಡುವೆ ಬರಕೂಡದು. ಕೆಲಸ ಮುಗಿದ ಮೇಲಷ್ಟೇ ವಿಶ್ರಾಂತಿ. ಇಲ್ಲ, ಇಲ್ಲ, ನಾನು ದಣಿದಿದ್ದೇನೆ. . .ಇಲ್ಲ, ಅಷ್ಟೆಲ್ಲ ದಣಿದಿಲ್ಲ. ಅದು ಬರಿಯ ದುರಭ್ಯಾಸ. ಅಶಿಸ್ತು ದುರಭ್ಯಾಸ. ಶಿಸ್ತು ಒಳ್ಳೆಯ ಅಭ್ಯಾಸ."

ವಿವಾಹದ ಬಗ್ಗೆ ಗುರುಗಳೆಂದರು, "ನಿಮ್ಮ ಕಣ್ಣುಗಳು ನಿರ್ಧರಿಸಲು ಬಿಡದಿರಿ. ನಿಮ್ಮ ಹೃದಯ ನಿರ್ಧರಿಸಲಿ. ಮತ್ತು ನಿಮ್ಮ ಪಾಲಕರ ಒತ್ತಾಯಕ್ಕೆ ಮಣಿಯಬೇಡಿ. ಇದು ನನ್ನ ಜೀವನವೆಂದು ಹೇಳಿರಿ. ನಿಮ್ಮ ಜೀವನ ನಿಮ್ಮದಾಗಿತ್ತು. ನೀವು ಯಾರನ್ನು ವಿವಾಹವಾಗವೇಕೆಂದು ನಾನು ಹೇಳಿಲ್ಲ, ನಾನು ಯಾರನ್ನು ವಿವಾಹವಾಗಬೇಕೆಂದು ನೀವು ಹೇಳಬೇಡಿರಿ. ನನ್ನ ಹೃದಯ ಯಾರನ್ನು, ಯಾವಾಗ ಒಪ್ಪುತ್ತದೆಯೋ ಅವರನ್ನು ನಾನು ಮದುವೆಯಾಗುತ್ತೇನೆ. ಜಾತಿ, ಹಣವನ್ನು ಲೆಕ್ಕಿಸದಿರಿ ಮತ್ತು ಅಮಿತಾಭ್ ಬಚ್ಚನ್‌ಗಳು ಬೇಡ, ಸರಿಯೇ!!"

ಒಬ್ಬ ಹುಡುಗಿ ರಾಜಕೀಯವನ್ನು ಅಭ್ಯಸಿಸಲು ಇಚ್ಛಿಸಿರುವುದಾಗಿ ಹೇಳಿದಳು. ಗುರುಗಳೆಂದರು, "ರಾಜಕೀಯ ಕೊಳಕು ವಿಷಯ. ಅದು ಭ್ರಷ್ಟಾಚಾರ ಮತ್ತು ದುರ್ಗುಣಗಳಿಂದ ತುಂಬಿದೆ. ನನಗೆ ವಕೀಲಿ ಇಷ್ಟವಿಲ್ಲ, ರಾಜಕೀಯವೂ ಇಷ್ಟವಿಲ್ಲ. ಎರಡರಲ್ಲೂ ಸುಳ್ಳು ಹೇಳಬೇಕಾಗುತ್ತದೆ. ಸತ್ಯಂ ವದ ಸಾಧ್ಯವಿಲ್ಲ.



ಧರ್ಮಂ ಚರ ಸಾಧ್ಯವಿಲ್ಲ. ನಾನು ವಕೀಲರನ್ನು ಭೇಟಿಯಾಗಿದ್ದೇನೆ– ಅತ್ಯುತ್ತಮ ವಕೀಲರು, ಜಡ್ಜ್‌ಗಳು. ನೀವು ಸುಳ್ಳಾಡುವಿರೆಂದು ನಾನೆಂದಾಗ, ನಾವು ಕೇವಲ ಫಿರ್ಯಾದನ್ನು ಗಮನಿಸುತ್ತೇವೆ ಎಂದರು. ನೋಡಿ, ನ್ಯಾಯಾಧೀಶರು ಸರಿಯಾದ ನಿರ್ಣಯ ತೆಗೆದುಕೊಳ್ಳಲು ಉತ್ತಮ ವಕೀಲರು ಸಹಾಯಕರಾಗಬೇಕು ಆದರೆ ಅವರು ಕೇವಲ ತಮ್ಮ ಕಕ್ಷಿದಾರರನ್ನು ಗೆಲ್ಲಿಸುತ್ತಾರೆ." ಆ ಹುಡುಗಿಯು ತಾನು ಮೊದಲ ಪ್ರಾಮಾಣಿಕ ರಾಜಕಾರಣಿಯಾಗುವೆನೆಂದು ಪ್ರಮಾಣಿಸಿದಾಗ ಗುರುಗಳೆಂದರು, "ಹಾಗಿದ್ದರೆ ನೀನು ಮೊದಲ ಪ್ರಾಮಾಣಿಕ ರಾಜಕಾರಣಿಯಾದರೆ, ಶೀಘ್ರವೇ ಅದು ಹೊಂದಿಕೆಯಾಗುವುದಿಲ್ಲವೆಂದು ನಿನಗೇ ತಿಳಿಯುತ್ತದೆ. ಇಂದಿನ ವಾತಾವರಣದಲ್ಲಿ ಯಾರಿಗೂ ಸಹನೆಯಿಲ್ಲ. ನಿನ್ನನ್ನು ಹೊರನೂಕಲಾಗುತ್ತದೆ." ನಂತರ ಮತ್ತೆ ಹೇಳಿದರು, "ನಿನಗೆ ಸಹಾಯಕವಾಗುವಂತಹುದನ್ನು ಕಲಿ. ನಿನಗೆ ಸಹಾಯಕವಾದರೆ ದೇಶಕ್ಕೆ ಸಹಾಯವಾಗುತ್ತದೆ. ಕಾಲ್ಪನಿಕ ವಸ್ತುಗಳ ಹಿಂದೆ ಹೋಗಬೇಡ. ನನಗೆ ರಾಜಕಾರಣವನ್ನು ಬದಲಾಯಿಸಬೇಕಾಗಿದೆ. ನಾನೊಮ್ಮೆ ನನ್ನ ಗುರುಗಳಾದ ಬಾಬೂಜಿ ಮಹಾರಾಜರನ್ನು ಭ್ರಷ್ಟಾಚಾರದ ಬಗ್ಗೆ ಕೇಳಿದೆ. ಅವರೆಂದರು, ಅದು ಕೇವಲ ಭಗವಂತನಿಂದ ಮಾತ್ರ ಸಾಧ್ಯ. ಅದನ್ನು ಬದಲಾಯಿಸಲು ಒಬ್ಬಿಬ್ಬರಿಗೆ ಸಾಧ್ಯವಿರಲಾರದಷ್ಟು ಆಳವಾಗಿ ಬೇರೂರಿದ್ದು, ಎಲ್ಲೆಡೆ ವ್ಯಾಪಿಸಿದೆ. ಆದಕ್ಕೆ, ನಾವು ಪ್ರಾರ್ಥಿಸೋಣ. ರಾಜನೀತಿಯನ್ನು ಬದಲಾಯಿಸಲು ಅದರಲ್ಲಿರುವ ಅಗತ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಆತ್ಮಗೌರವಕ್ಕಾಗಿ ಕಾನೂನನ್ನು ಪಾಲಿಸುವವರೆಗೂ ಅದಾಗದು. ನೀವು ಸತ್ಯವಾಡಿದಾಗ ಯಾರೂ ಚಪ್ಪಾಳೆ ತಟ್ಟುವುದಿಲ್ಲ. ಆದರೆ, ನಿಮ್ಮೊಳಗೆ ಸತ್ಯಸಂಧತೆಯ, ನಿಜ ಹೇಳಿದ ತೃಪ್ತಿಯಿರುತ್ತದೆ. ನನ್ನ ಗುರುದೇವರು ಹೇಳಿದಂತೆ, ಪ್ರಾಮಾಣಿಕತೆಯು ತನ್ನದೇ ಇನಾಮು. ಇಂದು ಜನ ಕೇಳುತ್ತಾರೆ, ಪ್ರಾಮಾಣಿಕರಾಗಿದ್ದಕ್ಕೆ ನಿಮಗೆ ದೊರೆತ ಪ್ರತಿಫಲವೇನು?' ಪ್ರಾಮಾಣಿಕನಾಗಿರಲು ಏನೂ ಸಿಗಬೇಕಿಲ್ಲ. ಹಾಗಾಗಿಯೇ, ನಾವೇನು ಮಾಡಬೇಕೋ, ಅದನ್ನೇ ಮಾಡುವುದೊಳಿತು, ಅದೇ ಪ್ರತಿಫಲ."

ಒಬ್ಬ ಹುಡುಗನು ಹೇಳಿದನು, "ಗುರುಗಳೇ, ನಾನು ನನ್ನ ತಂದೆಯ ವ್ಯಾಪಾರವನ್ನು ಸೇರಿಕೊಳ್ಳಬೇಕೆಂದಿದ್ದೇನೆ." ಗುರುಗಳೆಂದರು, "ಸರಿ, ಆದರೆ ನೆನಪಿಡು, ಪ್ರಾಮಾಣಿಕ ವ್ಯಾಪಾರವು ಫಲವನ್ನೀಯುತ್ತದೆ. ಪ್ರಾಮಾಣಿಕ ವ್ಯವಹಾರವು ನಿಮಗೆ 8%, 9%, 10% ನೀಡುತ್ತದೆ, ಅಪ್ರಾಮಾಣಿಕ ವ್ಯವಹಾರವು 40% ನೀಡುತ್ತದೆ. ಆದರೆ ಇಲ್ಲಿ ಅಪಾಯವಿರುತ್ತದೆ, ಅಲ್ಲವೇ? ನೀವು ಹಣ ಕಳೆದುಕೊಳ್ಳಬಹುದು, ಕೆಟ್ಟ ಹೆಸರು ಬರಬಹುದು, ಜೈಲಿಗೂ ಹೋಗಬೇಕಾಗಬಹುದು. ಪ್ರಾಮಾಣಿಕತೆಯು ಅಷ್ಟೇಲ್ಲ ಲಾಭ ತರುವುದಿಲ್ಲ. ಆದರೆ, ನಿಮ್ಮ ಹಣವನ್ನು ಸದ್ವಿನಿಯೋಗಿಸಿದರೆ ನೀವು ಸುಖಜೀವನ ನಡೆಸಬಹುದು."

ಒಬ್ಬ ಹುಡುಗನೆಂದನು, ಗುರುಗಳೇ, ನಾನೇನು ಮಾಡಬೇಕೋ ಗೊತ್ತಾಗುತ್ತಿಲ್ಲ. ಗುರುಗಳು ಉತ್ತರಿಸಿದರು, "ಚಿಂತಿಸಬೇಡ, ಬಾಗಿಲು ತೆರೆ–ಯುವುದು. ನೀವು ಒಂದೇ ಹಾದಿ ಹಿಡಿದರೆ ಚಿಂತಿಸಬೇಕಿಲ್ಲ. ಆದರೆ ಮೂರು ಕಡೆಯ ಕವಲುಹಾದಿಯಿದ್ದರೆ, ಎಲ್ಲಿ ಹೋಗಬೇಕೆಂದು ಯೋಚಿಸಬೇಕಾಗುವುದು. ಆಯ್ಕೆಯಿದ್ದರೆ ಸಮಸ್ಯೆ ಇರುವುದು. ನಿಮ್ಮಲ್ಲಿ ಆಯ್ಕೆಯಿದ್ದರೆ, ಮೂರು, ಐದು ಅಥವಾ ಹದಿನೈದು ಹಾದಿಯಿವೆಯೆಂದು ಯೋಚಿಸುವಿರಿ, ವ್ಯಾಕುಲಗೊಳ್ಳುವಿರಿ, ರಕ್ತದೊತ್ತಡ ಏರುವುದು, ಏಕೆಂದರೆ ಯಾವ ಹಾದಿಯಲ್ಲಿ ಹೋಗಬೇಕೆಂದು ನಿಮಗೆ ಗೊತ್ತಿಲ್ಲ. ನಿಮ್ಮ ಹೃದಯಕ್ಕೆ ತಿಳಿದಿದೆ, ಆದರೆ ಯಾವಾಗಲೂ ಹೃದಯ ಒಂದೆಳೆ ಎಳೆದರೆ, ಮನಸ್ಸು ಮತ್ತೊಂದೆಡೆ ಎಳೆಯುವ ಸಮಸ್ಯೆಯಿದೆ. ಅದಕ್ಕೇ, ನಿಮ್ಮ ಮನಸ್ಸನ್ನು ತೆಪ್ಪಗಿರಿಸಿ, ಹೃದಯವನ್ನು ಆಲಿಸಿರಿ. ನಿಮ್ಮಿಂದ ಎಂದೂ ತಪ್ಪಾಗದು."

ಜೂನ್ ತಿಂಗಳ ಮಧ್ಯದ ಹೊತ್ತಿಗೆ ಎರಡೂ ಸೆಮಿನಾರ್‌ಗಳು ಮುಗಿದು, ಕುಟೀರದಲ್ಲಿ ಮತ್ತು ಗುರುಗಳ ದೈನಂದಿನ ಎಲ್ಲ ಕಾರ್ಯಕಲಾಪಗಳು ಎಂದಿನಂತೆ ಸಾಮಾನ್ಯ ಸ್ಥಿತಿಗೆ ತಲುಪಿದ್ದು, ಗುರುಗಳು ಆರೋಗ್ಯಪೂರ್ಣರಾಗಿ ಎಲ್ಲ ಅಭ್ಯಾಸಿಗಳಿಗೆ ಸಮಯ ನೀಡುತ್ತಿದ್ದಾರೆ.



**ಸಹಜ ಸಂದೇಶ ನಂ:2013.26 ಗುರುವಾರ, 6ನೇ ಜೂನ್ 2013**

**ಪೂಜ್ಯ ಗುರುಗಳ ಆರೋಗ್ಯ ವಾರ್ತೆ**

ಪ್ರಿಯ ಸಹೋದರ ಸಹೋದರಿಯರೇ,

ಗುರುಗಳ ಆರೋಗ್ಯದ ಬಗ್ಗೆ ವಾರ್ತೆ ನೀಡಿ ಒಂದು ತಿಂಗಳ ಮೇಲಾಯಿತು. ಗುರುಗಳು ಚಿಕಿತ್ಸೆಗೆ ಚೆನ್ನಾಗಿ ಸ್ಪಂದಿಸುತ್ತಿದ್ದು ನಿರೀಕ್ಷಿಸಿದಂತೆ ಗುಣಮುಖರಾಗುತ್ತಿದ್ದಾರೆ. ಅವರ ಮೂಳೆಗಳು ಮರುಶಕ್ತಿ ಪಡೆದಿದ್ದು ಅವರ ಚಲನೆಯು ಉತ್ತಮವಾಗಿದೆ. ಸಂಪೂರ್ಣ ಗುಣವಾಗಲು ಕೆಲವು ತಿಂಗಳು ಬೇಕಾಗುತ್ತವೆ.

ಡಾ. ನಟವರ್ ಶರ್ಮಾ

## ಒಮೇಗಾದಲ್ಲಿ ಹಳೆಯ ವಿದ್ಯಾರ್ಥಿಗಳ ಕೂಟ

ಜೂನ್ ಮೊದಲನೇ ವಾರದಲ್ಲಿ ಒಮೇಗಾ ಶಾಲೆಯ ಮೊದಲನೇ ಮತ್ತು ಎರಡನೇ ತಂಡದ 75 ಹಳೆಯ ವಿದ್ಯಾರ್ಥಿಗಳು ಕೂಟದಲ್ಲಿ ಭಾಗವಹಿಸಿದ್ದರು. ಈ ಕೂಟದಲ್ಲಿ ಭಾಗವಹಿಸಲು ಅನುಮತಿ ದೊರಕಿದಂದಿನಿಂದಲೂ ಅಭ್ಯಾಸಿಗಳು ಗುರುಗಳನ್ನು ಭೇಟಿಮಾಡಲು ಬಹಳ ಉತ್ಸುಕರಾಗಿದ್ದರು. ಅವರನ್ನು ಭೇಟಿಮಾಡಿದ ಮೇಲೆ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಮೊದಲನೇ ದಿನ ಗುರುಗಳು ಅವರಿಗೆಲ್ಲ ಬೈಠಕ್ ನೀಡಿ ನಂತರ ಭಾಷಣ ಮಾಡಿದರು. ಅಭ್ಯಾಸಿಗಳಿಗೆ ಸಂತೃಪ್ತಿ ಮತ್ತು ಪ್ರಾಮಾಣಿಕತೆಯ ಅವಶ್ಯಕತೆ ಕುರಿತು ಮಾತನಾಡಿದರು. ಅಭ್ಯಾಸಿಗಳು ಮಾರ್ಗದರ್ಶಕರಾಗಿದ್ದುಕೊಂಡು, ತಾನು ಬದಲಾಗದೆ ಬದಲಾವಣೆಯನ್ನು ಹುಟ್ಟುಹಾಕುವ ಪರಿವರ್ತಕದಂತೆ ಕೆಲಸ ಮಾಡುತ್ತ, ಭವಿಷ್ಯದಲ್ಲಿನ ಭಾರತದ ಬಗೆಗಿನ 'ಅವರ' ದೂರದೃಷ್ಟಿಗನುಗುಣವಾಗಿ ತಮ್ಮ ಪಾತ್ರಗಳನ್ನು ನಿಭಾಯಿಸುವಂತೆ ಒತ್ತುಕೊಟ್ಟು ಹೇಳಿದರು.

ಎರಡನೇ ದಿನದ ಕಾರ್ಯಕ್ರಮ, ಗುರುಗಳ ಕುಟೀರದಲ್ಲಿ ಬೆಳಗಿನ 9 ಗಂಟೆಯ ಸತ್ಸಂಗದೊಡನೆ ಪ್ರಾರಂಭವಾಯಿತು. ನಂತರ ಸೋ ಕಮಲೇಶ ಪಟೇಲ್‌ರವರು ಮೂರು ವಿಚಾರಗಳ ಬಗ್ಗೆ ಮಾತನಾಡಿದರು: ಆಯ್ಕೆ, ಮುದ್ರೆಗಳು ಮತ್ತು ಸಂತೃಪ್ತಿ.

ಮುಂದಿನ ಮೂರು ದಿನಗಳ ಸಮಾವೇಶವು ಸಂಯೋಜಕರು ಹಾಗು ಅಭ್ಯಾಸಿಗಳೊಡನೆ ಉತ್ಕಟಾಸಕ್ತಿಯಿಂದ ಕೂಡಿದ್ದವು. ಈ ಸಮಾವೇಶಗಳಲ್ಲಿ ಅನೇಕ ವಿಷಯಗಳನ್ನು, ವಿಶೇಷವಾಗಿ ಸಾಧನೆ, ಮನೋಭಾವಗಳು, ಲೌಕಿಕ ಬದುಕಿನ ಹಾಗು ದಿನನಿತ್ಯದ ಜಂಜಾಟಗಳ ನಡುವಿನ ಹೊಂದಾಣಿಕೆಯ ಅಗತ್ಯತೆ-ಯ ಬಗ್ಗೆ ಚರ್ಚಿಸಲಾಯಿತು. ಈ ಚರ್ಚಾಕೂಟ ಪ್ರತಿಯೊಬ್ಬರಿಗೂ ಪರಸ್ಪರ ಪ್ರೋತ್ಸಾಹ, ಅನುಭವ ಹಾಗು ಸಂಯೋಜಕರ ಸಲಹೆಗಳೊಡನೆ ತಮ್ಮ ತಮ್ಮ ಕಷ್ಟಗಳ ಬಗ್ಗೆ ವಿಚಾರಮಾಡಲು ಒಂದು ತೆರೆದ ವೇದಿಕೆಯಾಗಿತ್ತು. ಐದನೇ ದಿನ ಅಭ್ಯಾಸಿಗಳು ಈ ಕೂಟದಿಂದ ಏನನ್ನು ಗಳಿಸಿಕೊಂಡರೆಂಬುದರ ಬಗ್ಗೆ ನಿರೂಪಿಸಿದರು. ಹಳೆಯ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ತಮ್ಮ ಶಾಲೆಯ ಬೋಧಕರು ಹಾಗೂ ಇತರೆ ಸಿಬ್ಬಂದಿ ವರ್ಗದವರನ್ನು ಭೇಟಿ ಮಾಡಲು ವಿಶೇಷ ಕಾಳಜಿ ತೋರಿ ಅಂದಿನ ದಿನವನ್ನು ಅಲ್ಲಿಯೇ ಕಳೆದರು. ಸೋ ಪಿ.ಆರ್. ಕೃಷ್ಣ, ಸೋ ಪುನೀತ್ ಲಾಲ್‌ಭಾಯ್‌ರವರು ಅಭ್ಯಾಸಿಗಳೊಡನೆ ಸಂವಾದ ನಡೆಸಿದರು.

ಕೂಟದ ವಿಶೇಷ ಸಮರೋಪಕ್ಕಾಗಿ ವಿದ್ಯಾರ್ಥಿಗಳು ಗುರುಗಳಿಗಾಗಿ ಒಂದು ಚಿಕ್ಕ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರೂಪಿಸಿದ್ದರು. ಅದರಲ್ಲಿ ಕೆಲವು ಹಾಡುಗಳು ಹಾಗು ನೃತ್ಯಗಳು (ಗರ್ಬಾ) ಸಹ ಇದ್ದವು. ಸೋ ಕಮಲೇಶ್ ಪಟೇಲ್‌ರವರು ಔಪಚಾರಿಕವಾಗಿ ಕೂಟವನ್ನು ಒಂದು ಪ್ರಶ್ನೆಯೊಡನೆ ಅಂತ್ಯಗೊಳಿಸಿದರು; "ಪ್ರಾಣಾಹುತಿಯ ಫಲಿತಾಂಶ ಏನು?". ಇದರ ಬಗ್ಗೆ ವಿದ್ಯಾರ್ಥಿಗಳು ಮನನ ಮಾಡಿ ಮುಂದಿನ ವರ್ಷ ಉತ್ತರದೊಡನೆ ಮತ್ತೊಮ್ಮೆ ಬರಬೇಕಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳ ಅನಂತರ ಅಭ್ಯಾಸಿಗಳು ಗುರುಗಳೊಡನೆ ಸಮೂಹ ಭಾವಚಿತ್ರ ತೆಗೆಸಿಕೊಂಡರು. ಭಾವಚಿತ್ರ ತೆಗೆಸಿಕೊಳ್ಳುವ ಸಮಯದಲ್ಲಿ ಗುರುಗಳು ಹೇಳಿದರು "ಹಳೆಯ ವಿದ್ಯಾರ್ಥಿಗಳು ಒಮೇಗ ಸಂಸ್ಥೆಯ ಆತ್ಮವಿದ್ದಂತೆ". ಸಮೂಹ ಭಾವಚಿತ್ರದ ಮೇಲ್ಗಡೆ "ಒಮೇಗಾದ ಆತ್ಮಗಳು" ಎಂದು ಶೀರ್ಷಿಕೆ ನೀಡುವಂತೆ ಸಹ ಅವರು ಹೇಳಿದರು.

ಮರುದಿನ ವಿದ್ಯಾರ್ಥಿಗಳು ಧೈರ್ಯ ಹಾಗು ಪ್ರೇಮ ತುಂಬಿದ ಹೃದಯ ಮತ್ತು ಜವಾಬ್ದಾರಿಯೊಡನೆ, ಇನ್ನೂ ಉತ್ತಮವಾಗಿ ತಯಾರಾಗಿ ಬರುವ ವರ್ಷ ಮತ್ತೆ ಬರುವ ತವಕದಲ್ಲಿ, ಹೊರಟರು.

## ಒಮೇಗಾದ ಆಶಾಕಿರಣ – ಒಬ್ಬ ಸಂಯೋಜಕರ ದೃಷ್ಟಿಕೋನ

*ವಿಕ್ಟರ್ ಕಣ್ಣನ್‌ರವರಿಂದ*

ಇಂದಿನ ಎಲ್ಲ ರೀತಿಯ ಹೆಚ್ಚುತ್ತಿರುವ ಭ್ರಷ್ಟ ವ್ಯವಸ್ಥೆ ಮತ್ತು ಅದರ ಬಗೆಗಿನ ನಮ್ಮ ಸಂವೇದನಾರಹಿತ ಮನೋಭಾವಕ್ಕೆ ಒಮೇಗಾ ಶಾಲೆಗಳು ಹಾಗು ಹಳೆಯ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಆಶಾಕಿರಣವಾಗಬಲ್ಲರು. ಒಮೇಗಿಗಳು ತಮ್ಮ ಹೊಸ ನೆಲೆಯಲ್ಲಿನ ವಿದ್ಯಾರ್ಜನೆ ಮೂಲಕ ಪೇಟೆಯಲ್ಲಿನ ಸವಾಲುಗಳನ್ನು ಎದುರಿಸಲು ಸಂರಕ್ಷಿತ ವಾತಾವರಣದಿಂದ ಹೊರಬಂದಿದ್ದಾರೆ. ಲಕ್ಷ್ಯಗೊಡದ ಹಾಗು ಆಧ್ಯಾತ್ಮಿಕ ಪ್ರಗತಿಗೆ ಪೂರಕವಲ್ಲದ ಮತ್ತು ಸಮತೋಲವುಳ್ಳ ಬದುಕಿಗೆ ಇಂದಿನ ಸಮಾಜದಲ್ಲಿ ಒಮೇಗಿಗಳು ದೊಡ್ಡ ಸವಾಲನ್ನು ಎದುರಿಸುತ್ತಿದ್ದಾರೆ. ಹೊಸದಾಗಿ ಕಂಡುಕೊಂಡ ಸ್ವಾತಂತ್ರ್ಯ ಮತ್ತು ಪ್ರಯೋಜನಕ್ಕೆ ಬಾರದ ಪ್ರವೃತ್ತಿಗಳು ಮತ್ತು ಅವಕಾಶಗಳಿಂದ ಅವರು ಪ್ರಲೋಭನೆಗೆ ಒಳಗಾಗುತ್ತಿದ್ದಾರೆ.

ಆದ್ದರಿಂದ ಅವರನ್ನು ವರ್ಷಕ್ಕೊಮ್ಮೆ ಮಣಪಾಕ್ಕಂಗೆ ಕರೆತಂದು ಒಗ್ಗೂಡಿಸುವ ಪೂಜ್ಯ ಗುರುಗಳ ಪ್ರಯತ್ನವು ಒಂದು ಉತ್ಕೃಷ್ಟ ಪರಿಕಲ್ಪನೆಯಾಗಿದ್ದು, ಇದನ್ನು ಸಂಬಂಧಪಟ್ಟವರೆಲ್ಲರೂ ವಿವೇಚನೆಯಿಂದ ಸುವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತರಬೇಕಾಗಿದೆ. ಹಿರಿಯರಿಗೆ ಇವರ ಮಾತುಗಳನ್ನು ಮತ್ತು ಸಂಕಷ್ಟಗಳನ್ನು ಕೇಳಲು ಹಾಗು ತಮ್ಮ ಯೌವನದಲ್ಲಿ ಬಯಸಿದ ಬಯಕೆಗಳು ಮತ್ತು ಗೊಂದಲಗಳ ಬಗ್ಗೆ ನೆನಪಿಸುತ್ತಾ ತಮ್ಮ ಈ ಅನುಭವಗಳನ್ನು ಹಳೆಯ ವಿದ್ಯಾರ್ಥಿಗಳೊಡನೆ ಹಂಚಿಕೊಳ್ಳಲು ಇದೊಂದು ಅವಕಾಶವಾಗಿತ್ತು. ಇದು ಅವರಿಗೆ ತಮ್ಮ ಭಾವನೆಗಳನ್ನು ತೆರೆದು ಹಂಚಿಕೊಳ್ಳಲು, ಆತ್ಮ ವಿಶಾಸ ಗಳಿಸಲು ಹಾಗು ನಿರಾಳವಾಗಿ ಬಹುಬೇಗ ಸಾಮಾನ್ಯ ಸ್ಥಿತಿಗೆ ಮರಳಲು ಸಹಾಯಮಾಡಿತು. ಹೀಗಾಗಿ ಅವರು ಹೆಚ್ಚಿದ ಆತ್ಮವಿಶ್ವಾಸ ಮತ್ತು ದೃಢ ನಂಬಿಕೆಯಿಂದ ಹಿಂದಿರುಗುತ್ತಿದ್ದಾರೆ. ವಿಶ್ವವಿದ್ಯಾಲಯಗಳು, ವಿಜ್ಞಾನ ಮತ್ತು ಆಧ್ಯಾತ್ಮಿಕ ಸಂಸ್ಥೆಗಳು, ಅಂತರಾಷ್ಟ್ರೀಯ ಯುವ ಜಾಲಗಳಾದ ಅಂತರ್ಜಾಲ ಮತ್ತು ಯು ಕನೆಕ್ಟ್‌ಗಳಲ್ಲಿ ವ್ಯಕ್ತಿತ್ವವಿಕಾಸದ ಹಾಗು ಉಪಕ್ರಮದ ವಿವರಣೆಗಳನ್ನು ಹಂಚಿಕೊಳ್ಳುವ ಕಾರ್ಯಕ್ರಮಗಳು ತುಂಬಾ ಉಪಯುಕ್ತವಾಗಿದ್ದವು.

ಅವರಿಗೆ ಶಕ್ತಿ, ಪ್ರೋತ್ಸಾಹ ಮತ್ತು ಸ್ಪಷ್ಟತೆಗಳನ್ನು ಕೊಡುವ ಉದ್ದೇಶ ಈಡೇರಿದೆಯೆಂದು ನನಗೆ ನಂಬಿಕೆಯಿದೆ. ಹಾಗಿದ್ದಾಗಲೂ, ಅಲ್ಲಲ್ಲಿ ತಾತ್ಕಾಲಿಕ ಆಧಿಕ್ಯ ಇರಬಹುದು. ಇದನ್ನು ನಿರಂತರವಾಗಿ ಅವರನ್ನು ವಸ್ತುಶಃ ಸಂಪರ್ಕದಲ್ಲಿಟ್ಟುಕೊಳ್ಳುವ ಮೂಲಕ ಸರಿಗೊಳಿಸಬೇಕಾಗಿದೆ. ಇವರನ್ನು ಸಹಜಮಾರ್ಗದ ಮುಖ್ಯ ವಾಹಿನಿಗೆ ತರುವಲ್ಲಿ ಈಗಾಗಲೇ ಇರುವ ಸ್ನೇಹಿತರಷ್ಟೇ ಅಲ್ಲದೆ ಇತರರನ್ನು ಮೇಲ್ಗೊಂಡು ಸಮುದಾಯವನ್ನು ವೃದ್ಧಿಪಡಿಸಿ ಇದರಲ್ಲಿ ಅವರನ್ನು ಒಂದುಗೂಡಿಸುವ ಕೆಲಸ ಆಗಬೇಕಾಗಿದೆ. ಇದಕ್ಕಾಗಿ ನಮ್ಮ ಕಾರ್ಯಕ್ರಮಗಳನ್ನು ನಿರಂತರವಾಗಿ ಹಂಚಿಕೊಳ್ಳಲು ಒಂದು ವೇದಿಕೆಯು ಸಹಾಯವಾಗಬಲ್ಲದು.

ಈ ಕಾರ್ಯಕ್ರಮದ ಮೂರನೆಯ ದಿನ ನನಗೆ ಇವರೆಲ್ಲ ಗುರುಗಳ ಪ್ರಾತಿನಿಧ್ಯದ ಬಗೆಗೆ ಕಾಳಜಿವುಳ್ಳ ಸಹಜ ಹಾಗು ಒಳ್ಳೆಯ ಹುಡುಗರೆಂದು ಅನ್ನಿಸಿತು. ಮುಂದೆ ಭರವಸೆಯ ದಿನಗಳು ಮುಂದೆ ಇವೆಯೆಂಬ ಉತ್ತೇಜನದೊಂದಿಗೆ ನಾನು ವಿದಾಯ ಹೇಳಿ ಬಂದೆ. ಇದಕ್ಕಾಗಿ ಈ ಮಕ್ಕಳಿಗೆ ವಂದನೆ ಸಲ್ಲಬೇಕು. ತಮ್ಮ ಹಾಗು ಸಮಾಜದ ಬಗ್ಗೆ ಜವಾಬ್ದಾರಿಯ ತಿಳಿವಳಿಕೆಯನ್ನು ಚಿಕ್ಕ ವಯಸ್ಸಿನಲ್ಲೇ ಅವರಿಗೆ ಮೈಗೂಡಿಸಿಕೊಳ್ಳುವಂತೆ ಮಾಡಿದರೆ, ಒಂದು ಹೊಸ ಶಕ್ತಿದ ನಿರ್ಮಾಣಕ್ಕೆ ಒತ್ತಾಸೆ ನೀಡಿದಂತಾಗುತ್ತದೆ.

## ಹಿರಿಯ ಅಭ್ಯಾಸಿಗಳಿಗಾಗಿ ಪರಂಧಾಮ ಆಶ್ರಮ

ಪರಂಧಾಮ ಆಶ್ರಮವನ್ನು ಹಿರಿಯ ಅಭ್ಯಾಸಿಗಳಿಗೆ (60 ವರ್ಷ ಮೀರಿದ ಅಭ್ಯಾಸಿಗಳು) ಅಲ್ಲಿ ಉಳಿದುಕೊಂಡು ತಮ್ಮ ಸಾಧನೆಯನ್ನು ಮುಂದುವರೆಸುವ ಸಲುವಾಗಿ ಉಪಯೋಗಿಸಿಕೊಳ್ಳಲು ಗುರುಗಳು ಆಶೀರ್ವದಿಸಿದ್ದಾರೆ. ಇದರ ಉಪಯೋಗವನ್ನು ಪಡೆದುಕೊಳ್ಳಬಯಸುವ ಅಭ್ಯಾಸಿಗಳು ಅಲ್ಲಿ 2 ರಿಂದ 6 ತಿಂಗಳವರೆಗೆ ಉಳಿದುಕೊಳ್ಳಲು ಅರ್ಜಿ ಹಾಕಿಕೊಳ್ಳಬಹುದು. ಅವರಿಗೆ ವಸತಿ ಊಟ ಹಾಗು ಇತರೆ ಅತ್ಯವಶ್ಯಕ ಸೌಕರ್ಯಗಳನ್ನು ಒದಗಿಸಲಾಗುವುದು. ವಾಸ್ತವ್ಯದ ಮಾಹಿತಿಯನ್ನು ಲಭ್ಯತೆಗೆ ಅನುಸಾರವಾಗಿ ಅಭ್ಯಾಸಿಗಳಿಗೆ ತಿಳಿಸಲಾಗುವುದು.ಈ ಕೆಳಗಿನ ಅಂತರ್ಜಾಲ ಸಂಪರ್ಕ ಪರಂಧಾಮದ ಬಗ್ಗೆ ಮಾಹಿತಿಗಳನ್ನು, ಅದರ ವಿಳಾಸ, ಲಭ್ಯವಿರುವ ಸೌಕರ್ಯಗಳು ಮತ್ತು ಅಲ್ಲಿ ತಂಗುವ ಸಲುವಾಗಿ ಆನ್‌ಲೈನ್ ಅರ್ಜಿ ಸಲ್ಲಿಸಲು ಅರ್ಜಿಯ ನಮೂನೆಗಳನ್ನು ಒದಗಿಸುತ್ತದೆ: http://www.sahajmarg.org/smww/param-dham.

ತುಂಬಿದ ಅರ್ಜಿಗಳನ್ನು ಅಂತರ್ಜಾಲದ ಮೂಲಕ ಈ ಈಮೇಲ್ ವಿಳಾಸಕ್ಕೆ ಕಳುಹಿಸಬಹುದು: paramdham@srcm.org.



## ಅಭ್ಯಾಸಿಗಳಿಗೆ ಮಿಷನ್ನಿನ ಚರಿತ್ರೆ ಮತ್ತು ಭವಿಷ್ಯಕ್ಕಾಗಿ ಮೂಲದಾಖಲೆಗಳನ್ನು ಸಿದ್ಧಪಡಿಸುವ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ:

ಇಲ್ಲಿಯವರೆಗೆ, ನಮ್ಮ ಪ್ರಾಚೀನ ಪತ್ರಾಗಾರ, ದಾಖಲೆಗಳು, ಛಾಯಾಚಿತ್ರಗಳು, ಆಡಿಯೊ, ವೀಡಿಯೊ ಮುಂತಾದವುಗಳನ್ನು ಸಂರಕ್ಷಿಸುವತ್ತ ಗಮನ ಹರಿಸಿದೆ. ನಾವು ಒಬ್ಬ ಚರಿತ್ರೆಕಾರನ ನೋಟದಲ್ಲಿ ಈ ದಾಖಲೆಗಳನ್ನು ಮತ್ತು ಇತರೆ ದೃಶ್ಯಾವಳಿಗಳನ್ನು ನೋಡಿದರೆ, ಮುಂದೊಮ್ಮೆ ಸರಿಸುಮಾರು ಒಂದು ನೂರು ವರ್ಷಗಳ ನಂತರ ಚರಿತ್ರಕಾರನ ದೃಷ್ಟಿಯಲ್ಲಿ ನಮ್ಮ ಆಶ್ರಮ ಮತ್ತು ಇತರೆ ಇಂತಹ ಸಂಸ್ಥೆಗಳ ಸಂಶೋಧನೆಗೆ ಹೇಗೆ ನೆರವಾಗಬಲ್ಲುದು ಎಂದು ಈಗ ನಾವು ಇದಕ್ಕೆ ಚಾರಿತ್ರಿಕ ಹಿನ್ನೆಲೆಯನ್ನು ಕೊಡುವತ್ತ ಪ್ರಯತ್ನ ಮಾಡುತ್ತಿದ್ದೇವೆ. ಇಂದು ನಮಗೆ ಕೇವಲ ನಿತ್ಯಗಟ್ಟಳೆಯ ಮತ್ತು ಕ್ಷುಲ್ಲಕವೆನಿಸುವ ವಿಷಯಗಳು ಮುಂದೆ ದಶಕಗಳ ನಂತರ ಒಬ್ಬ ಸಂಶೋಧಕನಿಗೆ ಅತಿ ಮಹತ್ವಪೂರ್ಣವೆನಿಸಬಲ್ಲವು.

ಆದ್ದರಿಂದ ಹಳೆಯ ದಾಖಲೆಗಳನ್ನು ಕಲೆಹಾಕಲು ಮತ್ತು ಲಭ್ಯವಿರುವ ದಾಖಲೆಗಳನ್ನು ಸಂರಕ್ಷಿಸುವುದು ಮುಖ್ಯವಾಗುತ್ತದೆ. ನಾವು ಚರಿತ್ರೆಯ ಹಿನ್ನೆಲೆ ಮತ್ತು ಹಳೆಯ ಪತ್ರಾಗಾರ ಅಥವ ಗ್ರಂಥಾಲಯ ವಿಜ್ಞಾನಗಳ ಜೊತೆಗೆ ಮಾಹಿತಿ ತಂತ್ರಜ್ಞಾನಗಳ ಹಿನ್ನೆಲೆಯುಳ್ಳ ಅಭ್ಯಾಸಿಗಳಿಗೆ ಮಣಪ್ಪಾಕ್ಕಂನಲ್ಲಿ ಪ್ರಾಚೀನ ಪತ್ರಾಗಾರವನ್ನು ಸೃಷ್ಟಿಸುವ ಸಲುವಾಗಿ ಸ್ವಯಂಸೇವೆ ಸಲ್ಲಿಸಲು ಕರೆ ನೀಡಿದ್ದೇವೆ. ಸೂಕ್ತ ವಿದ್ಯಾರ್ಹತೆ ಮತ್ತು ಅನುಭವವುಳ್ಳ ಅಭ್ಯಾಸಿಗಳಿಗೆ ಪೂರ್ಣಕಾಲಿಕ ಉದ್ಯೋಗ ನೀಡಲು ಉದ್ದೇಶಿಸಲಾಗಿದೆ.

### *ಮೊದಲ ಹೆಜ್ಜೆ*

ಪ್ರಾಚೀನ ಪತ್ರಾಗಾರವನ್ನು ಸೃಷ್ಟಿಸುವ ಸಲುವಾಗಿ ವಿವಿಧ ಕೇಂದ್ರಗಳು, ವಲಯಗಳು ಮತ್ತು ವಿದೇಶಗಳಿಂದ ನೂರಾರು ಅಭ್ಯಾಸಿಗಳು ಮೂಲ ದಾಖಲೆಗಳನ್ನು ಸಂಗ್ರಹಿಸಲು ಮುಂದಾಗಿದ್ದಾರೆ. ಅವರುಗಳು ನಮ್ಮ ಹಳೆಯ ಅಭ್ಯಾಸಿಗಳ ಸಂದರ್ಶನ ನಡೆಸಿ ಮಿಷನ್ನಿನ ಉಗಮದಿಂದ ಇಲ್ಲಿಯವರೆಗಿನ ಪ್ರಗತಿ ಮತ್ತು ಗುರುಗಳ ಪಾತ್ರದ ಬಗ್ಗೆ ಅವರ ನೆನಪುಗಳು, ವಿಚಾರಗಳನ್ನು ದಾಖಲಿಸುತ್ತಿದ್ದಾರೆ. ಭಾರತದ ಮತ್ತು ವಿದೇಶದ ವಲಯ ಸಂಯೋಜಕರು ಒಂದು ಸಕ್ರಿಯ ತಂಡವನ್ನು ನಿಯೋಜಿಸಿದ್ದು, ಸ್ವಯಂಸೇವಕರಿಗೆ ತಮ್ಮ ಕಾರ್ಯವನ್ನು ನಿರ್ವಹಿಸುವತ್ತ ನಿಗದಿತ ಮಾರ್ಗದರ್ಶನ ಮತ್ತು ಶಿಷ್ಟಾಚಾರ ಕ್ರಮಗಳ ಮೂಲಕ ನೆರವಾಗುತ್ತಿದ್ದಾರೆ. ಮಿಷನ್ನಿನ ಎಡೆಬಿಡದ ಬೆಳವಣಿಗೆಯಿಂದಾಗಿ ಈ ಕಾರ್ಯಕ್ಕೆ ನಿಜಕ್ಕೂ ಕೊನೆಯೆಂಬುದಿಲ್ಲ. ಹಳೆಯ ದಾಖಲೆಗಳ, ಛಾಯಾಚಿತ್ರಗಳ ಮತ್ತು ಹಸ್ತಕೃತಿಗಳ ಸಂಗ್ರಹಕಾರ್ಯವು ನಿಯಮಿತವಾಗಿ ಮುಂದುವರೆಯುವುದು.

ಆಶ್ರಮದ ಸ್ಥೂಲರೂಪದ ಚಾರಿತ್ರಿಕ ವಿಚಾರಗಳ ಬಗೆಗಿನ ಸಂಶೋಧನೆಯನ್ನು ಕೈಗೊಳ್ಳುವ ಇಚ್ಛೆಯುಳ್ಳ ಅಭ್ಯಾಸಿಗಳು ಆಶ್ರಮದ ಕಛೇರಿಯನ್ನು ಸಂಪರ್ಕಿಸಬಹುದು. ಅಭ್ಯಾಸಿಗಳು ಮುಂದಿನ ಭವಿಷ್ಯದ ಚಾರಿತ್ರಿಕ ಮೂಲಗಳನ್ನು ಈ ವರ್ತಮಾನದಲ್ಲಿ ಎಡೆಬಿಡದಂತೆ ಸಂರಕ್ಷಿಸಬಲ್ಲರಾದರೆ ಈ ಶ್ರಮದ ಭವಿಷ್ಯ ಆಶಾಜನಕವಾಗಬಲ್ಲದು. ಗುರುಗಳಿಗೆ ಈ ಕಾರ್ಯಾಚಾರಣೆ–ಯ ಆರಂಭದ ಬಗ್ಗೆ, ಕಾರ್ಯಕಾರಿ ಸಮಿತಿಯ ಜೂನ್ 5ರ ಸಭೆಯಂದು ತಿಳಿಸಿದಾಗ ಅವರು ಗಮನಿಸಿದ್ದೇನೆಂದರೆ "ನಾವು ಮುಂದಿನ ಭವಿಷ್ಯವನ್ನು ಇಂದು ಸೃಷ್ಟಿಸುತ್ತಿದ್ದೇವೆ".

### *ನಾಯಕನನ್ನು ಹಿಂಬಾಲಿಸಿ*

ಈ ಕಾರ್ಯಕ್ರಮವನ್ನು ಪ್ರಪಂಚದಾದ್ಯಂತ ನಡೆಸಲು ಅವರು ಕೈಗೊಂಡಿರುವ ವೈಯಕ್ತಿಕ ಆಸಕ್ತಿಯನ್ನು ಇದು ತೋರಿಸುತ್ತದೆ. ಎಷ್ಟೇ ಆದರೂ ಈ ಮಿಷನ್ನಿನ ಬಗ್ಗೆ ನಮ್ಮ ಗುರುಗಳು ಏಕಾಂಗಿಯಾಗಿ ಎಲ್ಲವನ್ನೂ ಭವಿಷ್ಯದ ಪೀಳಿಗೆಗಾಗಿ ದಾಖಲಿಸಿದ್ದಾರೆ – ಅದು ತಮ್ಮ ಗುರುಗಳ ಬಗೆಗೇ ಇರಬಹುದು, ಅವರ ಬೋಧನೆಗಳು ಅಥವಾ ಅವರ ಪ್ರವಾಸಗಳ ಬಗೆಗೆ ಇಲ್ಲವೇ ಗುರುಗಳ ಸ್ವಂತ ವಿಕಾಸದ ಮತ್ತು ವೈಯಕ್ತಿಕ ಬದುಕಿನ ಬಗ್ಗೆ ಇರಬಹುದು. ಅವರು ತಮ್ಮ ಪತ್ರ ವ್ಯವಹಾರ ಮತ್ತು ದಿನಚರಿಯನ್ನು ಒಬ್ಬ ಚರಿತ್ರಕಾರನ ಚಾರಿತ್ರಿಕ ದೃಷ್ಟಿಯಿಂದ ದಾಖಲಿಸಿದ್ದಾರೆ. ಪ್ರತಿಯೊಬ್ಬ ಅಭ್ಯಾಸಿಯು ಈ ಮಿಷನ್ನಿನ ಚರಿತ್ರೆಯಲ್ಲಿ ತಾನು ಪಾಲ್ಗೊಂಡು ಗಮನಿಸಿದ್ದನ್ನು ದಾಖಲಿಸಿದರೆ ಎಂತಹ ಅಮೂಲ್ಯ ವಿಷಯಗಳ ನಿಧಿಯಾಗಬಲ್ಲುದು ಎಂಬುದನ್ನು ಊಹಿಸಬಹುದು.

### ನೀವು ಹೇಗೆ ಸಹಾಯಮಾಡಬಲ್ಲಿರಿ?

೧. ನೀವು ಸ್ವಯಂಸೇವಕರಾಗಲು ಇಚ್ಛಿಸಿದರೆ ನಿಮ್ಮ ವಲಯಾಧಿಕಾರಿಯನ್ನು ಭೇಟಿಮಾಡಿರಿ. ಅವರು ನಿಮ್ಮನ್ನು ಚಾರಿತ್ರಿಕ ದಾಖಲಾತಿಯ ಸಂಯೋಜಕರೊಡನೆ ಸಂಪರ್ಕಿಸುತ್ತಾರೆ.

2. ನಿಮಗೆ ಗೊತ್ತಿರುವ ಯಾರಾದರೂ ಮುಖ್ಯ ಚಾರಿತ್ರಿಕ ಮಾಹಿತಿಗಳನ್ನು ನೀಡಬಲ್ಲವರಾಗಿದ್ದರೆ ಅವರ ಹೆಸರನ್ನು ಚಾರಿತ್ರಿಕ ಸಂಯೋಜಕರಿಗೆ ತಲುಪಿಸಿ.

ಈ ವಿಷಯವಾಗಿ ಅಂತರ್ಜಾಲ ಸಂಪರ್ಕ ಇಂತಿದೆ: mission.history@srcm.org

## ಮಕ್ಕಳ ಬೇಸಿಗೆ ಶಿಬಿರಗಳು



### ಸೋಜಿಗದ 10 – ಇಂದೋರ್, ಮಧ್ಯ ಪ್ರದೇಶ

ಸುಮಾರು 40 ಮಕ್ಕಳಿಗಾಗಿ 'ದಿ ವಂಡರ್ಫುಲ್ 10' (10 ವಿಸ್ಮಯಗಳು) ಪುಸ್ತಕ ಆಧಾರಿತ 6 ದಿನಗಳ ಕಾರ್ಯಕ್ರಮ ಇಂದೋರಿನಲ್ಲಿ ಆಯೋಜಿಸಲಾಗಿತ್ತು. ಈ ಪುಸ್ತಕವು ನಿರೂಪಣೆಗಳೊಂದಿಗೆ ಭಗವಂತನ ನೆನಪಿನಲ್ಲಿ, ಸರಿಯಾದ ಜೀವನಕ್ರಮ, ಸಂಪನ್ಮೂಲಗಳ ವಿವೇಕಯುತ ಉಪಯೋಗ, ಸೋದರ ಭಾವನೆ, ಎಲ್ಲರೊಡನೆ ಪ್ರೇಮ ಮತ್ತು ಕರುಣೆ ತುಂಬಿದ ಜೀವನದ ಬಗ್ಗೆ ಬೋಧಿಸುತ್ತದೆ. ಈ ಪುಸ್ತಕವನ್ನು ಮಕ್ಕಳಿಗಾಗಿ 10 ನಿಯಮಗಳನ್ನು ಕಲಿಸುವ ಸಲುವಾಗಿ ಉಪಯೋಗಿಸಲಾಯಿತು.

ಕಾರ್ಯಕ್ರಮವು, ಸರಿಯಾದ ಜೀವನಕ್ರಮದ ಬಗ್ಗೆ ಬಾಬೂಜಿಯವರು ಮಕ್ಕಳಿಗೆ ಪಾಠ ಮಾಡುತ್ತಿರುವ ನಾಟಕದ ಮೂಲಕ ಶುರುಮಾಡಲಾಯಿತು. ಅನೇಕ ಸ್ವಯಂಸೇವಕರು ಆಟಗಳ ಮತ್ತು ನಾಟಕಗಳ ಪರಿಕಲ್ಪನೆಯನ್ನು ರೂಪಿಸುವಲ್ಲಿ ಹಾಗು ಪುಸ್ತಕದಲ್ಲಿ ನಿರೂಪಿಸಿರುವಂತೆ ಮೌಲ್ಯಗಳನ್ನು ತಿಳಿಸಿಕೊಡುವಲ್ಲಿ ತೊಡಗಿಸಿಕೊಂಡಿದ್ದರು. ಮಕ್ಕಳು ಕಾರ್ಯಕ್ರಮವನ್ನು ನೋಡಿ ಸಂಪೂರ್ಣವಾಗಿ ಅನಂದಿಸಿದರು ಮತ್ತು ಇದು ಅವರ ಮೇಲೆ ಉತ್ತಮ ಪ್ರಭಾವ ಬೀರಿದಂತೆ ಕಂಡುಬಂತು.

### ವಿಶಾಖಪಟ್ಟಣಂ

7 ಮತ್ತು 9 ನೇ ವಯಸ್ಸಿನ ಸುಮಾರು 100 ಮಕ್ಕಳಿಗಾಗಿ ಒಂದು ಶಿಬಿರವನ್ನು ಆಶ್ರಮದಲ್ಲಿ 3 ದಿನಗಳ ಮಟ್ಟಿಗೆ ಮೇ ತಿಂಗಳು ದಿನಾಂಕ 19ರಿಂದ 21ರ ವರೆಗೆ ನಡೆಸಲಾಯಿತು. ಶಿಬಿರವು ಪ್ರಾರ್ಥನೆ ನಂತರ ಪರಿಚಯದೊಂದಿಗೆ ಶುರುವಾಯಿತು.

ಮಕ್ಕಳನ್ನು 4 ಗುಂಪುಗಳಾಗಿ ವಿಭಾಗಿಸಲಾಯಿತು. 'ಧ್ಯಾನದ ಪ್ರಯೋಜನಗಳು', 'ಚಾರಿತ್ರ್ಯ ನಿರ್ಮಾಣ'ದ ಬಗ್ಗೆ ಸಮಾವೇಶಗಳನ್ನು ನಡೆಸಲಾಯಿತು. ಮುಂದಾಳತ್ವಕ್ಕೆ ಇರಬೇಕಾದ ಗುಣಮಟ್ಟಗಳ ನಿರ್ಮಾಣ ಮತ್ತು ಒಗ್ಗೂಡಿದ ಕೆಲಸ ಹಾಗು ನಮ್ಮ ಗುರುಗಳ ಬಾಲ್ಯದ ಬಗ್ಗೆ ನಿರೂಪಣೆಗಳನ್ನು ಮಂಡಿಸಲಾಯಿತು. ಕುಶಲಕರ್ಮಿ ಕೆಲಸಗಳು, 'ಏನಿಮೇಷನ್' ಚಿತ್ರಗಳ ವೀಕ್ಷಣೆ, ಭಾಷಣ ಸ್ಪರ್ಧೆ, ಜೇಡಿಮಣ್ಣಿನ ಜೋಡಣೆಗಳು, ರಸಪ್ರಶ್ನೆ ಮತ್ತು ಹೊರಾಂಗಣ ಆಟಗಳು ನಡೆಸಲ್ಪಟ್ಟವು. ಈ ಕಾರ್ಯಕ್ರಮದ ನಡುವೆ, ಯುವ ಸ್ವಯಂಸೇವಕರು ಆಶ್ರಮದ ಆವರಣವನ್ನು ಶುಚಿಗೊಳಿಸಿದರು. ಅವರಿಗೆ ರಾತ್ರಿ 9.00 ಗಂಟೆಯ ವಿಶ್ವ ಪ್ರಾರ್ಥನೆಯ ಪ್ರಾಮುಖ್ಯತೆ, ದಿನಚರಿ ಬರೆಯುವ ಮತ್ತು ಮಲಗುವ ಮುನ್ನಿನ ಪ್ರಾರ್ಥನೆಯ ಬಗ್ಗೆ ತಿಳಿಸಿಕೊಡಲಾಯಿತು.

ದಿನಚರಿಯಲ್ಲಿ ಬೆಳಗ್ಗೆ ಶಾರೀರಿಕ ವ್ಯಾಯಾಮ ಮತ್ತು ಸೂರ್ಯೋದಯದ ವೀಕ್ಷಣೆಗಳು ಇದ್ದವು. ಚಿಕ್ಕ ಮಕ್ಕಳಿಗೆ ನೈತಿಕ ಮೌಲ್ಯಗಳಾದ ಸ್ವಯಂ ಶಿಸ್ತು, ಸತ್ಯವಚನದಲ್ಲಿ ಇರಬೇಕಾದ ಧೈರ್ಯ, ಹಿತಕರ ಮನೋಭಾವ ಹಾಗು ತಾಳ್ಮೆಯ ಅವಶ್ಯಕತೆಯ ಬಗ್ಗೆ ಮಾರ್ಗದರ್ಶನ ನೀಡಲಾಯಿತು. ಮುಖ್ಯ ಅತಿಥಿಗಳಿಂದ ಅಭ್ಯಾಸಿಗಳು ಮತ್ತು ಸ್ವಯಂ ಸೇವಕರಿಗೆ ಬಹುಮಾನ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಹಲವು ಪೋಷಕರು ಪದ್ಧತಿಯ ಬಗ್ಗೆ ಒಲವು ತೋರಿದರು ಹಾಗು ಅವರಲ್ಲಿ ಕೆಲವರು ಮಿಷನ್ನಿಗೆ ಸಹ ಸೇರಿಕೊಂಡರು. ಮಕ್ಕಳು ಬೇಸಿಗೆಯ ಶಿಬಿರದ ಬಗ್ಗೆ ಸಂತೋಷ ಹಾಗು ಉತ್ಸಾಹವನ್ನು ವ್ಯಕ್ತಪಡಿಸಿದರು.

### ಮಹಾರಾಷ್ಟ್ರದ ಜಲಗಾಂವ್‌ನಲ್ಲಿ ಮಕ್ಕಳ ಕಾರ್ಯಕ್ರಮ

ಜಲಗಾಂವ್ ಕೇಂದ್ರದಿಂದ 2013ರ ಜೂನ್ 9 ರಂದು ಜಲಗಾಂವ್ ಮತ್ತು ಸಮೀಪದ ಇತರೆ ಕೇಂದ್ರಗಳ ಸುಮಾರು 26 ಮಕ್ಕಳಿಗೆ ಒಂದು ಕಾರ್ಯಕ್ರಮವನ್ನು ಆಯೋಜಿಸಿಲಾಗಿತ್ತು. ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ನಂತರ ಮಕ್ಕಳನ್ನು ಒಂದು ಉದ್ಯಾನವನಕ್ಕೆ ಕರೆದುಕೊಂಡು ಹೋಗಿ ಹೊರಾಂಗಣದ ಆಟಗಳನ್ನು ಆಡಿಸಲಾಯಿತು. ಸಮೃದ್ಧ ಫಲಹಾರದ ನಂತರ ಕಥೆ ಹೇಳುವ ಕಾರ್ಯಕ್ರಮ ಮತ್ತು ನಿರೂಪಣೆಗಳು ನಡೆಸಲ್ಪಟ್ಟವು. ಮಧ್ಯಾಹ್ನದ ಊಟದ ನಂತರ ಮಕ್ಕಳು ಬಣ್ಣ ಬಣ್ಣದ ಕಾಗದಗಳ ಉಪಯೋಗ ಮತ್ತು ಅವುಗಳಿಗೆ ವಿವಿಧ ರೂಪುಗಳನ್ನು ಕೊಡುವ ಬಗ್ಗೆ ಕಲಿತುಕೊಂಡರು. 'ದೂರದರ್ಶನವನ್ನು ಹೇಗೆ ಬಳಸಬೇಕು' ಎಂಬುದರ ಬಗ್ಗೆ ಒಂದು ಮುಖ್ಯ ಚರ್ಚೆ ನಡೆಸಲಾಯ್ತು. ಬಹುಮಾನಗಳ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಮಕ್ಕಳು ಅತ್ಯುತ್ಸಾಹದೊಂದಿಗೆ ಪಾಲ್ಗೊಂಡಿದ್ದರು.

ಜಲಗಾಂವ್ ಮತ್ತು ಹತ್ತಿರದ ಕೇಂದ್ರಗಳಿಗಾಗಿ ಸುಮಾರು 30 ಅಭ್ಯಾಸಿಗಳಿಗೆ ಒಂದು ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅನೇಕ ವಿಚಾರಗಳ ಬಗ್ಗೆ ಅನೌಪಚಾರಿಕ ಚರ್ಚೆ ನಡೆಯಿತು. ಜುಲೈ 24ರ ಉತ್ಸವವನ್ನು ವರಣ್‌ಗಾಂವ್ ಕೇಂದ್ರದಲ್ಲಿ ನಡೆಸಲು ತೀರ್ಮಾನಿಸಲಾಯಿತು. ಪೂರ್ಣದಿನದ ಕಾರ್ಯಕ್ರಮವು ಸಂಜೆಯ 5 ಗಂಟೆಯ ಸತ್ಸಂಗದೊಂದಿಗೆ ಮುಕ್ತಾಯವಾಯಿತು.





## ಸೀತಾಪುರ, ಉತ್ತರ ಪ್ರದೇಶ




ಸೀತಾಪುರ ಕೇಂದ್ರದಲ್ಲಿ ಬ್ರಿಜ್ ಕಿಶೋರ್ ಟಂಡನ್ ಮಿಂಟೋ ದೇವಿ ಬಾಲಕಿಯರ ಶಾಲೆಯ 6ರಿಂದ 12ನೇ ತರಗತಿಯ ಮಕ್ಕಳಿಗಾಗಿ ಮೇ 21ರಿಂದ 30ರ ತನಕ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಮಕ್ಕಳಲ್ಲಿ ಆಧ್ಯಾತ್ಮದ ಬಗ್ಗೆ ಒಲವು ಬೆಳೆಸುವುದೇ ಈ ಶಿಬಿರದ ಧ್ಯೇಯವಾಗಿತ್ತು. ಆಯೋಜಕರು ಜೀವನ, 'ನಾನ್ಯಾರು?', ದೇಹ, ಮನಸ್ಸು, ಬುದ್ಧಿ, ಪ್ರೇಮ, ಪ್ರಕೃತಿ, ಗುರು ಮತ್ತು ಸೃಷ್ಟಿಕರ್ತನ ಕುರಿತು ಮಾತನಾಡಿದರು. ಸಾಮಾಜಿಕ ಹಿತಾಸಕ್ತಿ ಮತ್ತು ಪ್ರಸಕ್ತ ವಿದ್ಯಮಾನಗಳನ್ನು ಆಯಾ ವಿಷಯದ ಪರಿಣಿತರು ಚರ್ಚಿಸಿದರು.

ಮೇ 24ರಂದು ಸೀತಾಪುರದ ಪೋಲೀಸ್ ಆಯುಕ್ತರಾದ ಶ್ರೀ ಬಿ.ಬಿ. ಸಿಂಗ್‌ರವರು 'ಪೋಲೀಸ್ ಕಾರ್ಯ ರಚನೆ' ಮತ್ತು ಎನ್‌ಸಿಸಿಯ ಕರ್ನಲ್ ಪಿ.ಎಸ್.ಬಿಂದ್ರಾರವರು 'ಪ್ರದೂಷಣೆ ಮತ್ತು ನಮ್ಮ ವಾತಾವರಣ' ಬಗ್ಗೆ ಮಾತನಾಡಿ ಮಕ್ಕಳನ್ನು ರಂಜಿಸಿದರು. ಎಲ್ಲಾ ಭಾಗಿಗಳಿಗೆ ಪ್ರಮಾಣಪತ್ರ ವಿತರಣೆ ಮಾಡುವುದರೊಂದಿಗೆ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

## ಅಹಮದಾಬಾದ್ ಆಶ್ರಮ

ಗುಜರಾತಿನ ಎರಡೂ ವಲಯಗಳಿಗಾಗಿ ಮೇ 31ರಿಂದ ಜೂನ್ 1ವರೆಗೆ ಮೂರು ದಿನದ ಶಿಬಿರವನ್ನು ಆಯೋಜಿಸಲಾಗಿತ್ತು. 7–17 ವಯೋಮಾನದ ಎಪ್ಪತ್ತೈದು ಮಕ್ಕಳು ಭಾಗವಹಿಸಿದ್ದರು. ಹತ್ತು ನಿಯಮಗಳು ತಿಳಿಸುವ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಒತ್ತು ನೀಡಲಾಯಿತು. ಹಾಡುಗಳು, ಕರಕುಶಲ ಕಲೆ, ಪರಿಸರ ಸಂರಕ್ಷಣೆ, ಆಟೋಟಗಳು, ರಸಪ್ರಶ್ನೆ ಮತ್ತು ಜೀವನಮೌಲ್ಯ ಶಿಕ್ಷಣಗಳಂತಹ ಚಟುವಟಿಕೆಗಳನ್ನು ನಡೆಸಲಾಯಿತು. ಕಿರುಗತೆಗಳು ಮತ್ತು ಹತ್ತು ನಿಯಮಗಳನ್ನು ಆಧರಿಸಿ ಕಿರುನಾಟಕಗಳನ್ನು ಆಡಿಸಲಾಯಿತು. ಮಾನವರನ್ನು ದೈವಿಕತೆಯಿಂದ ಜನ್ಮಿಸಿದ ಆತ್ಮದಂತೆ ಬಿಂಬಿಸಿ ಸ್ವಯಂಸೇವಕರು ಆಡಿದ ನಾಟಕವನ್ನು ಎಲ್ಲರೂ ಮೆಚ್ಚಿಕೊಂಡರು.

ಎಲ್ಲ ಚಟುವಟಿಕೆಗಳನ್ನು ಮತ್ತು ಗುಂಪುಗಳನ್ನು ಹದಿನೈದು ಸ್ವಯಂಸೇವಕರು ಸಂಪೂರ್ಣವಾಗಿ ನಿರ್ವಹಿಸಿದರು.ಅವರು ಶಿಬಿರದಲ್ಲಿ ಶಿಸ್ತು, ಸಮಯ ನಿರ್ವಹಣೆ, ಸ್ವಚ್ಛತೆ ಮತ್ತು ಸಂರಕ್ಷಣೆಯನ್ನು ನೋಡಿ–ಕೊಂಡರು. 600 ವರ್ಷಗಳಷ್ಟು ಹಳೆಯದಾದ ಅಹಮದಾಬಾದಿನ ಇತಿಹಾಸವನ್ನು ಮಕ್ಕಳಿಗೆ ತಿಳಿಸಿಕೊಟ್ಟ ಪಟ್ಟಣದ ಸಾಂಸ್ಕೃತಿಕ ಪರ್ಯಟನೆಯು ಕೇಂದ್ರಬಿಂದುವಾಗಿತ್ತು. ಮಕ್ಕಳು ತುಂಬಿಸಿಕೊಟ್ಟ ಸರಳವಾದ ಅಭಿಪ್ರಾಯ ಪತ್ರವು ಅವರೆಲ್ಲರೂ ಕಲಿಕೆಯೊಡನೆ ಮೋಜು ಮಾಡಿದರೆಂದು ತಿಳಿಸಿಕೊಟ್ಟಿತು.



## ಪನ್ವೇಲ್, ಮುಂಬೈ

17ರಿಂದ 19 ಮೇವರೆಗೆ ಪನ್ವೇಲ್ ಆಶ್ರಮದಲ್ಲಿ ನಡೆದ ಮೂರು ದಿನದ ಶಿಬಿರದಲ್ಲಿ 13–17ವಯೋಮಾನ ಮತ್ತು 8–12 ವಯೋಮಾನದ ಪ್ರತಿ ಗುಂಪಿನಲ್ಲಿ ನಲವತ್ತೈದು ಮಕ್ಕಳು ಭಾಗವಹಿಸಿದ್ದರು. ಅವರು ಸಮೀಪದ ಕೇಂದ್ರಗಳಾದ ಪುಣೆ, ನಾಸಿಕ್ ಮತ್ತು ಖೋಪಲಿಗಳಿಂದ ಬಂದಿದ್ದರು. ಮೇ 17ರಂದು ಪರಿಚಯದ ನಂತರ, ಮಜಾ ಎಂದರೇನರ್ಥ, ಪಾಲುದಾರಿಕೆಯ ದೈವಿಕ ಮತ್ತು ಮಾನವೀಯ ವಿಧಾನಗಳು ಮತ್ತು ನಾನು ಯಾರು? ಎಂಬುದರ ಬಗ್ಗೆ ಸಾಮೂಹಿಕ ಚಟುವಟಿಕೆಗಳು ನಡೆದವು. ಚಿಕ್ಕ ಮಕ್ಕಳ ಸ್ಪಂದನ ಮತ್ತು ಅವಲೋಕನಗಳು ಆಯೋಜಕರನ್ನು ಮೂಕವಿಸ್ಮಿತರನ್ನಾಗಿ ಮಾಡಿದವು. ಸಂಜೆ, 'ಪ್ರೇಮದ ಜಾಗೃತಿ ಮತ್ತು ಅಸೂಯೆ,ಪೂರ್ವಗ್ರಹ, ದ್ವೇಷಗಳ ನಿರ್ಮೂಲನೆ' ವಿಷಯವನ್ನು ತೆಗೆದುಕೊಳ್ಳಲಾಯಿತು. ಮಲಗುವ ಮೊದಲು ಮಕ್ಕಳಿಗೆ ತಮ್ಮ ದಿನಚರಿ ಬರೆಯುವಂತೆ ತಿಳಿಸಲಾಗಿತ್ತು.

ಎರಡನೆಯ ದಿನವು ಯೋಗದೊಂದಿಗೆ ಪ್ರಾರಂಭವಾಯಿತು. ಹದಿ ವಯಸ್ಸಿನವರಿಗೆ 'ಹಣದ ಪ್ರಾಮುಖ್ಯತೆ' ವಿಷಯ ಕೊಟ್ಟಿದ್ದು, ಮಕ್ಕಳಿಗೆ ಹತ್ತು ನಿಯಮಗಳನ್ನು ಸಂಖ್ಯೆಗಳೊಡನೆ ರಚನಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗಿ ತಿಳಿಸಲಾಯಿತು. ನಂತರ, ಮಕ್ಕಳಿಗೆ ಪ್ರೇರಣಾತ್ಮಕ ಕಿರುಚಿತ್ರಗಳನ್ನು ತೋರಿಸಿದ ಮೇಲೆ ರಸಪ್ರಶ್ನೆ ಕಾರ್ಯಕ್ರಮವಿತ್ತು. 'ಯಶಸ್ಸಿನ ಸಾಧನಗಳು' ಚರ್ಚೆಯಲ್ಲಿ ಅವರು ತಮ್ಮ ಭವಿಷ್ಯದ ವೃತ್ತಿಜೀವನದ ಕುರಿತು ಪ್ರಶ್ನೆಗಳನ್ನು ಕೇಳಿದರು. ಸೋ ಸುದೇಶ್ ತ್ರಿಪಾಠಿಯವರು 'ಇನ್‌ಕ್ರೆಡಿಬಲ್ ಇಂಡಿಯಾ' ಮತ್ತು '10 ಆಕಸ್ಮಿಕ ವೈಜ್ಞಾನಿಕ ಶೋಧನೆಗಳು' ವಿಡಿಯೋ ತೋರಿಸಿದ ನಂತರ ಬುದ್ಧಿಯನ್ನು ಚುರುಕುಗೊಳಿಸುವ ಮತ್ತು ದೃಷ್ಟಿ ಭ್ರಮೆಗಳನ್ನೊಳಗೊಂಡ ರಸಪ್ರಶ್ನೆಯನ್ನು ನಡೆಸಿದರು.

ಕೊನೆಯ ದಿನದಂದು ಮಕ್ಕಳನ್ನು ಕ್ರೀಡೆಗಾಗಿ ಉದ್ಯಾನಕ್ಕೆ ಕರೆದೊಯ್ಯಲಾಯಿತು. ಗುರುಗಳು ಹೇಳಿದ ಕಥೆಗಳನ್ನು ಮಕ್ಕಳು ಕಳೆದ ಎರಡು ದಿನಗಳಿಂದ ತಾಲೀಮು ಮಾಡಿದ್ದು, ಅಭಿನಯಿಸಿ ತೋರಿಸಿದರು. ಶಿಬಿರವು ಬಹುಮಾನ ವಿತರಣೆಯಿಂದ ಕೊನೆಗೊಂಡಿದ್ದು, ಎಲ್ಲಾ ಮಕ್ಕಳೂ ಸಂತೋಷ ಪಟ್ಟರೆಂದು ಅವರ ಅಭಿಪ್ರಾಯ ಸೂಚನೆಯಿಂದ ತಿಳಿದುಬಂದಿತು.

## ಹೊಸ ನೇಮಕಾತಿಗಳು

ಸೋ ಕೆ.ಟಿ. ಕಣ್ಣನ್
ಕೇಂದ್ರ ಮುಖ್ಯಸ್ಥರು, ಪಾಲಕ್ಕಾಡ್

ಸೋ ಸಿ.ಕೆ. ಪ್ರಮೋದ್
ಕೇಂದ್ರ ಮುಖ್ಯಸ್ಥರು, ಕೊಚ್ಚಿ/ಎರ್ನಾಕುಲಂ

ಸೋ. ಪಿ.ಕೆ. ಗೋಪಿನಾಥ್
ಕೇಂದ್ರ ಮುಖ್ಯಸ್ಥರು, ಪಟ್ಟಾಂಬಿ



## ವಲಯ ಯುವ ಸಭೆ, ಭೋಪಾಲ್, ಮ.ಪ್ರ

ಎರಡು ದಿನದ ಯುವಸಭೆಯನ್ನು ಭೋಪಾಲ್ ಆಶ್ರಮದಲ್ಲಿ ಮೇ 11 ಮತ್ತು 12ರಂದು 18ರಿಂದ 35ರ ವಯೋಮಾನದ ನಲವತ್ತಮೂರು ಅಭ್ಯಾಸಿಗಳಿಗಾಗಿ ನಡೆಸಲಾಯಿತು. ವಿದಿಷಾ, ಭೋಪಾಲ್, ಗಂಜ್ ಬಸೋದ, ಹೋಷಂಗಾಬಾದ್, ಇಂದೋರ್, ಜಬಲ್ಪುರ್, ತಿಕಮ್‌ಗಢ, ಬೇರಸಿಯ, ದಿಲ್ಲೋಡ್, ರೇವಾ ಮುಂತಾದ ಕೇಂದ್ರಗಳ ಅಭ್ಯಾಸಿಗಳು ಅತ್ಯುತ್ಸಾಹದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಸಭೆಯ ವಿಷಯ 'ಜೀವನದಲ್ಲಿ ಸಹಜಮಾರ್ಗದ ಸಮ್ಮಿಲನ'ವೆಂದಾಗಿತ್ತು. 11ರಂದು ನೋಂದಣಿಯ ನಂತರ ಕಾರ್ಯಕ್ರಮವು 'ಜೀವನದಲ್ಲಿ ಸಮತೋಲನೆ' ವಿಷಯದೊಡನೆ ಪ್ರಾರಂಭವಾಯಿತು. ಎರಡನೆಯ ದಿನದಂದು, 'ಜೊತೆಗೂಡಿ ಕೆಲಸ ಮಾಡುವುದು' ವಿಷಯದ ಮೇಲೆ ಕೇಂದ್ರೀಕರಿಸಲಾಯಿತು. ಎರಡೂ ವಿಷಯಗಳನ್ನು ವಿವಿಧ ಚಟುವಟಿಕೆಗಳು, ಉಪನ್ಯಾಸಗಳು, ಗುರುಗಳ ವಿಡಿಯೊ, ಆತ್ಮವಿಮರ್ಶೆ ಮತ್ತು ಕಾರ್ಯಗತಗೊಳಿಸುವಿಕೆ, ಸಮೂಹ ಚರ್ಚೆಗಳು, ವಿಷಯಾಭ್ಯಾಸ, ಕಿರುನಾಟಕ ಮತ್ತು ಆಟಗಳು ಇತ್ಯಾದಿಗಳಿಂದ ನಿರೂಪಿಸಲಾಯಿತು. ಯುವ ಅಭ್ಯಾಸಿಗಳು ಹೃತ್ಪೂರ್ವಕವಾಗಿ ಪಾಲ್ಗೊಂಡು, ಗುರುಗಳು ಸೃಷ್ಟಿಸಿದ ದೈವಿಕ ಪರಿಸರವನ್ನು ಅನುಭವಿಸಿದರು. ಗುರುಗಳೊಂದಿಗಿನ ಕೊಂಡಿಯನ್ನು ಸಮತೋಲಿತ ಜೀವನ ಮತ್ತು ಒಟ್ಟಾಗಿ ಕೆಲಸ ಮಾಡುವುದರ ಚಾವಿಯಂತೆ ತಮ್ಮೊಡನೊಯ್ದರು. ಭಾಗಿಗಳು ಸಂತೋಷದಿಂದ ಶೀಘ್ರದಲ್ಲೇ ಮತ್ತೊಮ್ಮೆ ಇಂತಹ ಕಾರ್ಯಕ್ರಮ ನಡೆಸಬೇಕೆಂದು ಅಭಿಪ್ರಾಯ ಪಟ್ಟರು.

## ಬೆಳ್ಳಿಹಬ್ಬ ಆಚರಣೆ, ವಿಶಾಖಪಟ್ಟಣಂ

ಈ ಆಶ್ರಮವನ್ನು ಗುರುಗಳು ಮೇ 15, 1988ರಂದು ಉದ್ಘಾಟಿಸಿದರು. ಕೇಂದ್ರದ ಅಭ್ಯಾಸಿಗಳು ಈ ಸಂದರ್ಭವನ್ನು ಆಚರಿಸಬೇಕೆಂದು ಗುರುಗಳ ಅನುಮತಿ ಕೋರಿದಾಗ, ಅವರು ಇದನ್ನು **ಸಮರ್ಪಕ**ವಾಗಿ ಆಚರಿಸಬೇಕೆಂದು ನಿರ್ದೇಶಿಸಿ ಸಮ್ಮತಿಸಿದರು.

ಮೇ 15ರಂದು, 1988ರಲ್ಲಿ ಕೇಂದ್ರ ಮುಖ್ಯಸ್ಥರಾಗಿದ್ದ ಸೋ. ವಿಶ್ವಪತಿ ಶಾಸ್ತ್ರಿಯವರು ನಡೆಸಿಕೊಟ್ಟ 9 ಘಂಟೆಯ ಸತ್ಸಂಗದೊಡನೆ ಆರಂಭವಾದ ಕಾರ್ಯಕ್ರಮದಲ್ಲಿ ಹನ್ನೆರಡು ಉಪಕೇಂದ್ರಗಳಿಂದ 600ಕ್ಕೂ ಮಿಗಿಲಾದ ಅಭ್ಯಾಸಿಗಳು ಪಾಲ್ಗೊಂಡರು. 1988ರಿಂದಲೂ ಸಾಧನೆ ಮಾಡುತ್ತಿರುವ ಅಭ್ಯಾಸಿಗಳು, ಕಾರ್ಯಕಾರಿ ಸದಸ್ಯರು ಮತ್ತು ಸ್ವಯಂಸೇವಕರನ್ನು ಗೌರವಿಸಲಾಯಿತು. 1988ರಲ್ಲಿ ಮಿಷನ್ ಸೇರಿದ್ದರು ನಂತರ ಹೊರಹೋದ ಅಭ್ಯಾಸಿಗಳನ್ನು ಈ ಆಚರಣೆಯಲ್ಲಿ ಪಾಲ್ಗೊಳ್ಳಲು ಕೇಂದ್ರ ಮುಖ್ಯಸ್ಥರಾದ ಸೋ. ಕೆ.ಸಪ್ತಮುಖಲುರವರು ಆಹ್ವಾನಿಸಿದ್ದರು. ಅವರಲ್ಲಿ ಸುಮಾರು ಐವತ್ತು ಜನರು ಆಚರಣೆಯಲ್ಲಿ ಪಾಲ್ಗೊಂಡು, ಆಶ್ರಮದಲ್ಲಿ ಸಮಯ ಕಳೆದರು. ಕೆಲವರು ಸಾಧನೆಯನ್ನು ಪುನಃ ಪ್ರಾರಂಭಿಸುವಲ್ಲಿ ಆಸಕ್ತಿ ತೋರಿದರು.

ಗುರುಗಳು 1988ರಲ್ಲಿ ನೀಡಿದ ಹಲವು ಭಾಷಣಗಳಲ್ಲಿ, 'ಗುರುಗಳೊಡನೆಯ ಸಂಬಂಧ', 'ನಮ್ಮ ಆಶ್ರಮಗಳ ಉದ್ದೇಶ' ಮತ್ತು 'ಸಾಧನೆಗೆ ಪ್ರಮುಖ ಅಗತ್ಯ' ಎನ್ನುವ ಉಪನ್ಯಾಸಗಳನ್ನು ಆಧರಿಸಿ ಮಾತನಾಡಲಾಯಿತು.

ಸಂಜೆ 6.30ರ ಸತ್ಸಂಗದೊಡನೆ ಸಮಾರಂಭವು ಮುಕ್ತಾಯಗೊಂಡಿತು. ಸ್ಥಳೀಯ ತೆಲುಗು ವಾರ್ತಾಪತ್ರಿಕೆಗಳು ಈ ಕಾರ್ಯಕ್ರಮದ ವರದಿ ನೀಡಿದವು. ಎಲ್ಲಾ ಅಭ್ಯಾಸಿಗಳಿಗೆ ಇದೊಂದು ಸ್ಮರಣೀಯ ಸಂದರ್ಭವಾಗಿದ್ದು, ಇಂತಹ ಕೃಪಾಭರಿತ ಉತ್ಸವದಂದು ಅವರು ತಮ್ಮ ಸಂತೋಷ ಹಾಗೂ ಕೃತಜ್ಞತೆ ವ್ಯಕ್ತಪಡಿಸಿದರು.





# ದೇವರಿಯಾ ಆಶ್ರಮ, ಉತ್ತರ ಪ್ರದೇಶ

ಪ್ರಭಾ ಕೇಂದ್ರ

ದೇವರಿಯಾವು ಜಿಲ್ಲಾ ಕೇಂದ್ರವಾಗಿದ್ದು, ಉತ್ತರಪ್ರದೇಶದ ಪೂರ್ವಭಾಗದಲ್ಲಿದೆ. ಇದು ಗೋರಖ್‌ಪುರದಿಂದ ಸುಮಾರು 50 ಕಿ.ಮೀ. ದೂರದಲ್ಲಿದೆ. 'ದೇವರಿಯಾ'ದ ಅರ್ಥ– ದೇವಾಲಯಗಳ ಸ್ಥಳವೆಂದಾಗುತ್ತದೆ. 1994ನೇ ಇಸವಿಯಂದು ಈ ಕೇಂದ್ರವು ಅಸ್ತಿತ್ವಕ್ಕೆ ಬಂದಿತು. ಛಪ್ರಾ(ಬಿಹಾರ)ದ ಪ್ರಶಿಕ್ಷಕರಾದ ಸೋ ರಾಮದಾಸ್ ಸಿಂಗ್‌ರವರು ದೇವರಿಯಾ ಕೇಂದ್ರದ ಉಗಮಕ್ಕೆ ಕಾರಣಕರ್ತರು. ಅವರು ಕೇಂದ್ರಕ್ಕೆ ಪದೇ ಪದೇ ಭೇಟಿ ನೀಡಿದ್ದರಿಂದ ಕೇಂದ್ರದಲ್ಲಿ ಸೋ ಅಜಯ್ ತಿವಾರಿಯವರು ಮೊದಲ ಪ್ರಶಿಕ್ಷಕರಾಗಿ ನೇಮಕಗೊಂಡರು. ಸೋ ತಿವಾರಿಯವರ ಕಠಿಣ ಪರಿಶ್ರಮದಿಂದ ಕೇಂದ್ರವು ವೇಗವಾಗಿ ಅಭಿವೃದ್ಧಿ ಕಂಡಿತು. ಸಮಾಜದ ಎಲ್ಲಾ ಮಾದರಿಯ ಜನರೂ ಮಿಷನ್ ಸೇರಿದರು. ಗುರುಗಳ ಸಹಪಾಠಿಯಾಗಿದ್ದ ಸೋ ರಮಾಶಂಕರ್ ದೀಕ್ಷಿತ್‌ರವರು ಅವರಲ್ಲೊಬ್ಬರಾಗಿದ್ದು, ಈಗ ಪ್ರಶಿಕ್ಷಕರಾಗಿದ್ದಾರೆ. 1999ರ ಅಕ್ಟೋಬರ್ 15ರಂದು ಗುರುಗಳು ದೇವರಿಯಾದಲ್ಲಿ ಕೆಲ ಘಂಟೆಗಳಿಗಾಗಿ ಭೇಟಿ ನೀಡಿದ್ದರು. ಅವರು ಅಲ್ಪಸಮಯವೇ ಅಲ್ಲಿ ಉಪಸ್ಥಿತರಿದ್ದರೂ ಕೇಂದ್ರದ ಅಭ್ಯಾಸಿಗಳಿಗೆ ಅದು ಕೃಪಾಮಯ ಘಳಿಗೆಯಾಗಿತ್ತು.

ಭಾನುವಾರದ ಸತ್ಸಂಗಗಳನ್ನು ಸೋ ದೀಕ್ಷಿತ್‌ರವರ ಸ್ವಗೃಹದಲ್ಲಿ ನಡೆಸಲಾಗುತ್ತಿತ್ತು. ಅಭ್ಯಾಸಿಗಳ ಸಂಖ್ಯೆ ಹೆಚ್ಚಿದಂತೆ, ಆಶ್ರಮದ ಅಗತ್ಯ ಎಲ್ಲರಿಗೂ ಕಂಡುಬಂದಿತು. ವೈದ್ಯ ಪಾರಸ್‌ನಾಥ್ ತಿವಾರಿ, ಡಾ.ಮುರ್ಜಾನಿ ಮತ್ತು ಸೋ ಐ.ಡಿ. ಕೇಡಿಯಾರಂತಹ ಶ್ರದ್ಧಾಳುಗಳ ತಂಡವು ಅಭ್ಯಾಸಿಗಳ ನೆರವಿನಿಂದ 2001ರ ಜೂನ್ 21ರಂದು ಆಶ್ರಮದ ಜಮೀನನ್ನು ಖರೀದಿಸಿದರು.

ಜಮೀನಿನ ಸ್ಥಳವು 1.5 ಎಕರೆಯಷ್ಟಿದ್ದು, ದೇವರಿಯಾ ಪಟ್ಟಣದಿಂದ ನಾಲ್ಕು ಕಿ.ಮೀ ದೂರದ ಸೋನುಘಾಟ್ ಎಂಬ ಪ್ರದೇಶದಲ್ಲಿದೆ. ಆಶ್ರಮದ ನಿರ್ಮಾಣವು 19 ಮಾರ್ಚ್ 2006ರಂದು ಪ್ರಾರಂಭವಾಯಿತು. ಧ್ಯಾನಮಂದಿರದ ವಿಸ್ತೀರ್ಣವು ಪಾಕಶಾಲೆಯನ್ನೂ ಒಳಗೊಂಡಂತೆ 65X40 ಚ.ಅಡಿಯಿದ್ದು, ಸುಮಾರು 100 ಅಭ್ಯಾಸಿಗಳು ಧ್ಯಾನಿಸಲು ಅನುಕೂಲಕರವಾಗಿದೆ. ಗುರುಗಳ ಆದೇಶದಂತೆ ಧ್ಯಾನಮಂದಿರವನ್ನು ಮಿಷನ್ನಿನ ಕಾರ್ಯದರ್ಶಿಗಳಾದ ಸೋ ಯು.ಎಸ್. ಬಾಜಪೇಯಿರವರು 16ನೇ ನವೆಂಬರ್ 1008ರಂದು ಉದ್ಘಾಟಿಸಿದರು. ಗುರುಗಳು ಪ್ರೇಮದಿಂದ ಅದನ್ನು 'ಶಾಂತಿ ಆಶ್ರಮ'ವೆಂದು ಹೆಸರಿಸಿದ್ದಾರೆ.

ಆಶ್ರಮದಲ್ಲಿ ಮೇಲುಸ್ತುವಾರಿಯವರ ಕೋಣೆ, ಶೌಚಾಲಯಗಳಂತಹ ಸೌಲಭ್ಯವಿದ್ದು, ಪುಟ್ಟ ಉದ್ಯಾನವು ಸೌಂದರ್ಯವನ್ನು ಹೆಚ್ಚಿಸಿದೆ. ಅಭ್ಯಾಸಿಗಳು ರಾತ್ರಿ ತಂಗುವ ವ್ಯವಸ್ಥೆಯಿದೆ. ಭಾನುವಾರದ ಸತ್ಸಂಗಕ್ಕೆ ನಿಯಮಿತವಾಗಿ ಸುಮಾರು ಎಂಭತ್ತು ಅಭ್ಯಾಸಿಗಳು ಬರುತ್ತಾರೆ. ಅವರು ಸಮೀಪದ ಕೇಂದ್ರಗಳ ಅಭ್ಯಾಸಿಗಳೊಡಗೂಡಿ ಭಂಡಾರವನ್ನು ಆಚರಿಸುತ್ತಾರೆ. ಸತ್ಸಂಗದ ಹೊರತಾಗಿ, ಅಭ್ಯಾಸಿ ತರಬೇತಿ ಕಾರ್ಯಕ್ರಮ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಸ್ಥಳೀಯ ಅಭ್ಯಾಸಿಗಳು ಏರ್ಪಡಿಸುತ್ತಾರೆ. ಆಶ್ರಮ ನಿರ್ವಾಹಕ ಮಂಡಳಿಯು ಪೂರ್ಣ ಆಶ್ರಮದಲ್ಲಿ ಸೌರಶಕ್ತಿ ದೀಪಗಳು, ಗೇಟ್‌ಗಳು ಇತ್ಯಾದಿಗಳನ್ನು ನಿರ್ಮಿಸುವ ಅಭಿಲಾಷೆ ಹೊಂದಿದೆ.

ನಮ್ಮೆಲ್ಲರ ಆಧ್ಯಾತ್ಮಿಕ ಪ್ರಗತಿಗಾಗಿ ಗುರುಗಳು ಪ್ರೇಮದಿಂದ ಕರುಣಿಸಿದ ಇಂತಹ ಆಶ್ರಮವನ್ನು ಪಡೆದ ನಾವೆಲ್ಲರೂ ಧನ್ಯರು.











To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2013 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.